ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 11 ಮಾರ್ಚ್ 15, 1981 ಬೆಲೆ : 50 ಪೈಸೆ

ಕಾರ್ಮಿಕರೇ ಎಚ್ಚರಾಗಿರಿ!

ಕಾರ್ಮಿಕ ಕ್ಷೇತ್ರದಲ್ಲಿ ಸಂಪೂರ್ಣ ಸೋಲನ್ನನುಭವಿಸಿದ ಕಾಂಗ್ರೆಸ್ಸಿನ ಐ.ಎನ್.ಟಿ.ಯು.ಸಿ.ಯು ಕಂಗಾಲಾಗಿ ಹುಚ್ಚುಹುಚ್ಚು ಕ್ರಮಗಳನ್ನು ತೆಗೆದುಕೊಳ್ಳಲಾರಂಭಿಸಿದೆ. ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರವನ್ನು ಮುರಿಯಲು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾಗಿದ್ದರಿಂದ, ಕಾರ್ಮಿಕರ ಮೇಲೆ ಹಲ್ಲೆ ದಬ್ಬಾಳಿಕೆಗಳನ್ನೆಲ್ಲಾ ಮಾಡಿದರೂ ಅವರ ಐಕ್ಯತೆಯನ್ನು ಮುರಿಯಲು ಸಾಧ್ಯವಾಗದ್ದರಿಂದ ಕನ್ನಡ-ಕನ್ನಡೇತರರೆಂಬ ಘೋಷಣೆಯನ್ನು ಮುಂದೆ ತಂದಿದೆ. ಈ ಘೋಷಣೆಯನ್ನು ಕಾಂಗ್ರೆಸ್ಸಿನ ವಿದ್ಯಾರ್ಥಿ ಸಂಸ್ಥೆಯ ಹೆಸರಿನಲ್ಲಿ ತಂದು, ಒಂದು ವಾರದೊಳಗೆ ಮುಷ್ಕರ ಕೊನೆಗಾಣದಿದ್ದರೆ ತಮಿಳು ಮತ್ತು ಕೇರಳದ ಕಾರ್ಮಿಕರಿಗೆ ಅವರ ವಸತಿಗಳಿಗೆ ನೀರು, ವಿದ್ಯುಚ್ಛಕ್ತಿ ಮುಂತಾದುವುಗಳನ್ನು ನಿಲ್ಲಿಸಿ ಅವರನ್ನೆಲ್ಲಾ ಕರ್ನಾಟಕದಿಂದ ಹೊರತಳ್ಳುವ ಬೆದರಿಕೆ ಕೊಡುವುದಾಗಿ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಈ ಪ್ರಶ್ನೆಯು ಲೋಕಸಭೆ ಮತ್ತು ರಾಜ್ಯಸಭೆಗಳಲ್ಲೂ ವಿರೋಧ ಪಕ್ಷದವರೆತ್ತಿದ್ದಾರೆ. ಇದು ತುಂಬಾ ಹೇಯ

ಸಂಪಾದಕೀಯ

ವಾದ ಕೃತ್ಯವಾಗಿದೆ. ರಾಷ್ಟ್ರದ ಐಕ್ಯತೆಗೂ, ಸಮಗ್ರತೆಗೂ ಧಕ್ಕೆ ತರುವುದಾಗಿದೆ. ಇದನ್ನೆಲ್ಲಾ ರಾಷ್ಟ್ರಪ್ರೇಮಿಗಳೂ ಪ್ರಜಾಪ್ರಭುತ್ವವಾದಿಗಳೂ ತೀವ್ರವಾಗಿ ಖಂಡಿಸುವುದಗತ್ಯ. ಮತ್ತು ಆ ಪ್ರಚಾರ ಮಾಡುವವರ ಮೇಲೆ ತೀವ್ರ ಕ್ರಮತೆಗೆದುಕೊಳ್ಳುವುದಗತ್ಯ.

ಇನ್ನೊಂದು ಕಾಂಗ್ರೆಸ್ಸಿನ ಯುವಕ ಸಂಸ್ಥೆಯ ನಾಯಕರೆನಿಸಿಕೊಳ್ಳುವ ಶ್ರೀ ಹರಿಪ್ರಸಾದ್‌ರವರ ನೇತೃತ್ವದಲ್ಲಿ ಮೈಕೋ ಕಾರ್ಮಿಕರ ಸಂಘಟನೆಯ ಮೇಲೂ ಕಾರ್ಮಿಕ ನಾಯಕ ಕಾಂ. ಸೂರ್ಯನಾರಾಯಣರಾಯರ ಮೇಲೂ ಗೂಂಡಾಪಡೆಗಳ ದಾಳಿ ನಡೆದಿದೆ. ಕಾರ್ಮಿಕರ ಮಧ್ಯೆ ಅಶಾಂತಿಗೆ ಇದು ಎಡೆಕೊಟ್ಟಿದೆ. ಹತ್ತಾರು ಗೂಂಡಾಗಳು ಪೋಲೀಸರ ನೆರವಿನಿಂದ ಸಂಘದ ಆಫೀಸಿಗೆ ಬಲಾತ್ಕಾರದಿಂದ ನುಗ್ಗಿ ತಮ್ಮ ವಶದಲ್ಲಿಟ್ಟುಕೊಂಡಿರುತ್ತಾರೆ. ಇದು ಮೇರೆ ಮೀರಿಹೋದಾಗ ಪೋಲೀಸರು ಕಾಂಗ್ರೆಸ್ಸಿನ ಯುವಕ ನಾಯಕ ಹರಿಪ್ರಸಾದ್‌ರವರನ್ನು ಬಂಧಿಸಬೇಕಾಯಿ

(ಕಡೇ ಪುಟ ನೋಡಿ)

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನಿಲುವಿನ ವಿರುದ್ಧ

ದೇಶದಾದ್ಯಂತ ಯಶಸ್ವೀ ಮುಷ್ಕರ

ಫೆಬ್ರವರಿ 22, 1981ರಂದು ನವದೆಹಲಿಯಲ್ಲಿ ಕೇಂದ್ರಕಾರ್ಮಿಕ ಸಂಘಟನೆಗಳ ಮತ್ತಿತರ ಕಾರ್ಮಿಕರ ರಾಷ್ಟ್ರೀಯ ಒಕ್ಕೂಟಗಳು ಪ್ರತಿನಿಧಿಗಳು ಸಭೆ ಸೇರಿ, ಟ್ರೇಡ್ ಯೂನಿಯನ್ ಚಳುವಳಿಯ ಮೇಲೆ ಕೇಂದ್ರ ಸರ್ಕಾರದ ಉದ್ದೇಶಪೂರ್ವಕ ಆಕ್ರಮಣ ಮತ್ತು ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಮಾರ್ಚ್ 11 ರಂದು ರಾಷ್ಟ್ರವ್ಯಾಪೀ ಮುಷ್ಕರಕ್ಕೆ ಕರೆಕೊಡಲಾಗಿತ್ತು.

ಈ ಕರೆಯ ಅನುಗುಣವಾಗಿ ದೇಶಾದ್ಯಂತ ಯಶಸ್ವೀ ಮುಷ್ಕರ ನಡೆದಿರುವ ವರದಿ ಬಂದಿವೆ. ಭಾರತದ ಕಾರ್ಮಿಕವರ್ಗ ಅಪೂರ್ವ ಐಕ್ಯತೆಯನ್ನು ಪ್ರದರ್ಶಿಸಿದೆ. ಇಂಟಕ್ (ಐ)ನ ಹೊರತಾಗಿ ಉಳಿದೆಲ್ಲ ಕಾರ್ಮಿಕ ಸಂಘಟನೆಗಳು ಈ ಮುಷ್ಕರದಲ್ಲಿ ಭಾಗವಹಿಸಿದ್ದವು.

ರಾಜ್ಯದ ರಾಜಧಾನಿಯಾದ ಬೆಂಗಳೂರಿನಲ್ಲಿ ಸಿ.ಐ.ಟಿ.ಯು. ಕಾರ್ಯಕರ್ತರು ಸರ್ಕಾರಿ ಕಛೇರಿಗಳೆದುರು ಪಿಕೆಟಿಂಗ್ ನಡೆಸಿ ಬಂಧಿತರಾದರು. ಇತ್ತೀಚೆಗೆ ಹರಿಹರದಲ್ಲಿ ನಡೆದ ಸಿ.ಐ.ಟಿ.ಯು.ವಿನ 3ನೇ ರಾಜ್ಯಸಮ್ಮೇಳನದಲ್ಲಿ ಈ ಪಿಕೆಟಿಂಗ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮಾರ್ಚ್ 11ರ ಬೆಳಿಗ್ಗೆ ನಗರದ ನಾನಾಕಡೆ ಸಿ.ಐ.ಟಿ.ಯು. ಕಾರ್ಯಕರ್ತರು ಪಿಕೆಟಿಂಗ್ ನಡೆಸಿದರು. ಬೆಂಗಳೂರಿನ ಜಿಲ್ಲಾ ಕಛೇರಿ (DC Office) ಎದುರು ನಡೆದ ಪಿಕೆಟಿಂಗ್ ನೇತೃತ್ವವನ್ನು ಸಿ. ಐ. ಟಿ. ಯು. ಖಜಾಂಚಿ ಮತ್ತು ಬೆಂಗಳೂರು ಜಿಲ್ಲಾ ಸಿ.ಐ.ಟಿ.ಯು. ಕಾರ್ಯದರ್ಶಿ ಕಾಂ. ಅನಂತರಾಂ, ನಗರದ ಚಿಕ್ಕಪೇಟೆ ಪೋಸ್ಟ್ ಆಫೀಸ್ ಎದುರು ನಡೆದ ಪಿಕೆಟಿಂಗ್ ಕಾರ್ಯಕ್ರಮದ ನೇತೃತ್ವವನ್ನು ಸಿ.ಐ.ಟಿ.ಯು. ಕಾರ್ಯಕಾರಿ ಸಮಿತಿ ಸದಸ್ಯ ಕಾಂ. ಆರ್. ಶ್ರೀನಿವಾಸ್, ಅಲಸೂರಿನಲ್ಲಿ ನಡೆದ ಕಾರ್ಯಕ್ರಮದ ನೇತೃತ್ವವನ್ನು ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿ ಸದಸ್ಯ ಕಾಂ. ನಾರಾಯಣರಾವ್‌ಬಾನು ವಹಿಸಿದ್ದರು.

(ಕಡೇ ಪುಟ ನೋಡಿ)

ಜನ ಜಾಗೃತಿಯೊಂದೇ ಭಾರತ ರಕ್ಷಣೆಯ ದಾರಿ: ಬಸು

ದೇಶದಲ್ಲಿ ಹಿಂದೂ-ಮುಸ್ಲಿಂ ಜಗಳ, ಹರಿಜನರ ಮೇಲೆ ದಬ್ಬಾಳಿಕೆ, ಮಹಿಳೆಯರ ಮೇಲೆ ಅತ್ಯಾಚಾರಗಳು, ರಾಷ್ಟ್ರದ ಈಶಾನ್ಯ ಭಾಗದಲ್ಲಿ ವಿಛಿದ್ರಕಾರಿ ಚಳುವಳಿ ಮುಂದುವರಿಯುತ್ತಲೇ ಇದ್ದರೆ ಬಲಿಷ್ಟ ಭಾರತವನ್ನು ಕಟ್ಟುವುದಾದರೂ ಹೇಗೆ? ಅಮೆರಿಕನ್ ಸಾಮ್ರಾಜ್ಯಶಾಹಿಗಳಿಂದ ಇರುವ ಯುದ್ಧ ಭೀತಿಯನ್ನು ಹಿಮ್ಮೆಟ್ಟಿಸುವುದು ಹೇಗೆ? ಜನ ಮತ್ತು ಸರ್ಕಾರದ ನಡುವೆ ಯುದ್ಧ ನಿಲ್ಲದಿದ್ದರೆ ಭಾರತ ರಕ್ಷಣೆ ಸಾಧ್ಯವಾಗದ ಮಾತು ಎಂದು ಪ. ಬಂಗಾಳದ ಮುಖ್ಯಮಂತ್ರಿ ಹಾಗೂ ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ಸದಸ್ಯ ಕಾಂ. ಜ್ಯೋತಿಬಸು ಹೇಳಿದರು.

ಮಾರ್ಚ್ 5ರಿಂದ 8ರ ವರೆಗೆ ಜರುಗಿದ ರಾಜ್ಯ ಸಿ.ಐ.ಟಿ.ಯು.ವಿನ ಮೂರನೇ ಸಮ್ಮೇಳನದ ಅಂತಿಮ ದಿನದಂದು ಜ್ಯೋತಿಬಸು ಅವರು ಹರಿಹರದಲ್ಲಿ ಭಾರಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಜನರ ಸಮಸ್ಯೆಗಳು ಇರುವವರೆಗೆ ಅವರು ಸರ್ಕಾರದೊಡನೆ ಯುದ್ಧಕ್ಕೆ ನಿಲ್ಲುತ್ತಾರೆ-ಚಳುವಳಿ ಮಾಡುತ್ತಾರೆ. ಮುಗಿಲುಮುಟ್ಟುತ್ತಿರುವ ಬೆಲೆಏರಿಕೆ, ತೀವ್ರವಾಗಿ ಹೆಚ್ಚುತ್ತಿರುವ ನಿರುದ್ಯೋಗ, ಹಸಿವು ಮತ್ತು ಬಡತನಗಳಿಂದ ಕಂಗಾಲಾಗಿರುವ ಜನತೆಯು ಸರ್ಕಾರದೊಡನೆ ಕದನಕ್ಕಿಳಿಯದೆ ಬೇರೆ ದಾರಿಯೇ ಇಲ್ಲ ಎಂದು ಬಸು ಅವರು ಹೇಳಿ ಈ ಕದನದಲ್ಲಿ ತಾವು ಮತ್ತು ತಮ್ಮ ಪಕ್ಷ ಜನರ ಜೊತೆ ಇರುತ್ತೇವೆ ಎಂದರು.

ಆಳುವ ಕಾಂಗ್ರೆಸ್(ಐ) ಪಕ್ಷವು ಚುನಾವಣಾ ಸಮಯದಲ್ಲಿ ಕೊಟ್ಟ ಒಂದೇ ಒಂದು ಭರವಸೆಯನ್ನೂ ಈಡೇರಿಸಿಲ್ಲ ಎಂದು ಕೇಂದ್ರ ಸರ್ಕಾರವನ್ನು ಉಗ್ರವಾಗಿ ಟೀಕಿಸಿದ ಜ್ಯೋತಿಬಸು ಅವರು ಬಂಡವಾಳಶಾಹಿ ಮತ್ತು ಭೂಮಾಲೀಕರ ಪರವಾದ ಆರ್ಥಿಕ ನೀತಿಗಳನ್ನು ಪಾಲಿಸಿಕೊಂಡು ಬಂದು, ಕೊರತೆ ಮುಂಗಡ ಪತ್ರವನ್ನು ಮಂಡಿಸಿಕೊಂಡು ದೇಶದಲ್ಲಿ ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಾಧ್ಯವೆ ಎಂದು ಪ್ರಶ್ನಿಸಿದರು. ಆರ್ಥಿಕ ಸ್ಥಿರತೆ ಇರದ ದೇಶದಲ್ಲಿ ಸಹಜವಾಗಿ ರಾಜಕೀಯ ಸ್ಥಿರತೆಯೂ ಇರುವುದಿಲ್ಲ ಎಂದು ಅವರು ಹೇಳಿದರು.

ಆಳುವ ಕಾಂಗ್ರೆಸ್(ಐ) ಪಕ್ಷದಲ್ಲಿ ಗುಂಪುಗಾರಿಕೆ, ಒಳಜಗಳ, ಕಿತ್ತಾಟ ಎಲ್ಲಾ ರಾಜ್ಯಗಳಲ್ಲೂ ಕಂಡು ಬರುತ್ತಿದೆ ಎಂದು ವಿಶ್ಲೇಶಿಸಿದ ಜ್ಯೋತಿ ಬಸು ಅವರು, ಹಿಡಿತ ತಪ್ಪುತ್ತಿರುವುದರಿಂದ ಪಾರಾಗಲು ಜನರ ಸಹಕಾರ



ಪಡೆಯದೆ ರಾಷ್ಟ್ರೀಯ ಭದ್ರತಾ ಕಾಯಿದೆಯಂತಹ ಸುಗ್ರೀವಾಜ್ಞೆಗಳನ್ನು ಹೊರಡಿಸಿ ವಿರೋಧಿಗಳನ್ನು ಸದೆಬಡಿಯಲು ಕೇಂದ್ರ ಸರ್ಕಾರ ಸಜ್ಜಾಗಿದೆ ಎಂದರು.

ಜೀವವಿಮಾ ನೌಕರರು ಶ್ರೇಷ್ಠ ನ್ಯಾಯಾಲಯದ ಮೂಲಕ ಪಡೆದಿದ್ದ ಕೆಲವೊಂದು ಸವಲತ್ತುಗಳಿಗೆ ಸುಗ್ರೀವಾಜ್ಞೆಯ ಮೂಲಕ ಕುತ್ತು ತಂದ ಕೇಂದ್ರ ಸರ್ಕಾರವು ನ್ಯಾಯಾಲಯಗಳನ್ನು ಗೌರವಿಸುತ್ತಿಲ್ಲ ಎಂಬುದನ್ನು ತೋರಿಸುತ್ತದೆ ಎಂದು ಬಸು ನುಡಿದರು.

ಬೆಂಗಳೂರಿನ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ನೌಕರರು ಕಳೆದ 70 ದಿವಸಗಳಿಂದ ಮುಷ್ಕರ ಹೂಡಿದ್ದರೂ ಕಾರ್ಮಿಕ ನಾಯಕರನ್ನು ಮಾತುಕತೆಗೂ ಕರೆಯದ ಕೇಂದ್ರ ಸರ್ಕಾರವು ಟ್ರೇಡ್‌ಯೂನಿಯನ್ ಎಂದರೇನು ಎಂಬುದೇ ಗೊತ್ತಿಲ್ಲದ ಸಿ. ಎಂ. ಸ್ಟೀಫನ್‌ರನ್ನು ಸಂಧಾನಕ್ಕೆ ಕಳುಹಿಸಿ ಟ್ರೇಡ್‌ಯೂನಿಯನ್ ಚಳುವಳಿಗೆ ಕೇಂದ್ರವು ಅನ್ಯಾಯ ಮಾಡುತ್ತಿದೆ ಎಂದು ಬಸು ನೊಂದು ನುಡಿದರು.

ರೈತರು, ಕಾರ್ಮಿಕರು, ಮತ್ತು ಇತರೆ ದುಡಿಯುವ ಜನರ ಬೇಡಿಕೆಗಳ ಬಗ್ಗೆ ಸದಾ ಅಸಹಕಾರ ತೋರಿಸಿಕೊಂಡು ಬರುತ್ತಿರುವ ಕೇಂದ್ರ ಸರ್ಕಾರವು ವಿರೋಧ ಪಕ್ಷಗಳ ಸಹಕಾರ ಕೋರುತ್ತಿದೆ. ಜನ ಹೋರಾಟಗಳನ್ನು ಹತ್ತಿಕ್ಕುವ ಸರ್ಕಾರಕ್ಕೆ ವಿರೋಧಿ ಸಹಕಾರದ ಬಗ್ಗೆ ನಿಜಕ್ಕೂ ಕಳಕಳಿ ಇದೆ ಎಂಬ ಬಗ್ಗೆ ಬಸು ಸಂದೇಹ ವ್ಯಕ್ತಪಡಿಸಿದರು.

ತೀರ ಅಸಂಘಟಿತರಾಗಿರುವ ರೈತರು ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಚಳುವಳಿ–ಪ್ರದರ್ಶನಗಳನ್ನು ನಡೆಸಿದರೆ ಅವರ ಸಮಸ್ಯೆಗಳನ್ನು ಕೇಂದ್ರದ ಮತ್ತು ರಾಜ್ಯಗಳ ಆಳುವ ಕಾಂಗ್ರೆಸ್(ಐ) ಪಕ್ಷವು ಪರಿಹರಿಸದೆ ತಾನೇ ಒಂದು ಬೃಹತ್ ರೈತರ ರ್‍ಯಾಲಿ ಏರ್ಪಡಿಸುತ್ತದೆ. ದಿಲ್ಲಿಗೆ ಉಚಿತ ಪ್ರಯಾಣ, ಊಟ, ವಸತಿಗಳನ್ನು ಏರ್ಪಾಡು ಮಾಡುತ್ತದೆ. ರೈತರ ಕಷ್ಟಗಳು ರ್‍ಯಾಲಿಯನ್ನು ಏರ್ಪಡಿಸುವುದರಿಂದ ಪರಿಹಾರವಾಗುತ್ತವೆಯೆ ಎಂದು ಬಸು ಪ್ರಶ್ನಿಸಿದರು.

ದಕ್ಷ ಸರ್ಕಾರ

ಇಡೀ ದೇಶದಲ್ಲಿ ತಮ್ಮ ರಾಜ್ಯದ ವಾಮಪಂಥೀಯ ಸರ್ಕಾರವು ದಕ್ಷ ಮತ್ತು ಸ್ವಚ್ಛ ಆಡಳಿತ ನೀಡುತ್ತಿರುವ

(ಕಡೇ ಪುಟ ನೋಡಿ)

ಸಂಕ್ಷಿಪ್ತ ಸಮಾಚಾರಗಳು

ಗೋಳಿತೊಟ್ಟು

22-2-81ರಂದು ಪುತ್ತೂರು ತಾಲ್ಲೂಕಿನ ಗೋಳಿತೊಟ್ಟು ಗ್ರಾಮದಲ್ಲಿ ರೈತ ಸಂಘ ಪ್ರಾರಂಭಿಸಲಾಯಿತು. ಯುವಜನ ಮುಖಂಡರಾದ ಕಾಂ. ವಿಲ್ಫ್ರೆಡ್ ಡಿಸೋಜಾ ಸ್ವಾಗತಿಸಿದರು. ಗ್ರಾಮದ ಉತ್ಸಾಹೀ ಯುವಕ ರಜಾಕ್‌ರನ್ನು ಸಭೆಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ನಂತರ ಮಾತನಾಡಿದ ರೈತ-ಕಾರ್ಮಿಕ ಮುಖಂಡ ಕಾಂ. ಬಿ. ರಾಮಕೃಷ್ಣ ಅವರು ತಮ್ಮ ಸುಧೀರ್ಘ ಭಾಷಣದಲ್ಲಿ ದೇಶದ ಪ್ರಸಕ್ತ ಪರಿಸ್ಥಿತಿ, ರೈತ ಚಳುವಳಿಯ ಅಗತ್ಯತೆ ಮುಂತಾದ ವಿಷಯಗಳ ಬಗ್ಗೆ ಮನವಟ್ಟು ಮಾಡಿಕೊಟ್ಟರು.

ನಂತರ ಕೇರಳದಿಂದ ಬಂದಿದ್ದ ಕಾಂ. ರಾಜನ್ ಅವರು ಮಲೆಯಾಳಂನಲ್ಲಿ ಮಾತನಾಡಿ ಕೇರಳ ಸರ್ಕಾರ ಅನುಸರಿಸುತ್ತಿರುವ ರೈತ-ಕಾರ್ಮಿಕ ಪರ ಧೋರಣೆ, ಅಭಿವೃದ್ಧಿ ಕಾರ್ಯಕ್ರಮಗಳು ಮುಂತಾದ್ದರ ಬಗ್ಗೆ ವಿವರಿಸಿದರು. ವಿದ್ಯಾರ್ಥಿ ಮುಖಂಡ ಜೋಯ್ ಅವರು ಮಾತನಾಡುತ್ತ "ರೈತರು ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳಬೇಕಾದರೆ ಸಂಘಟಿತರಾಗಬೇಕು" ಎಂದರು. ನಂತರ ರೈತ ಕಾರ್ಮಿಕ ಹೋರಾಟ ಸಮಿತಿಯನ್ನು ಚುನಾಯಿಸಲಾಯಿತು.

ಬೀದರ

ದಿನಾಂಕ 22-2-81ರಂದು ಬೀದರಿನ ಇನ್‌ಸ್ಪೆಕ್ಷನ್ ಬಂಗ್ಲೆಯಲ್ಲಿ ವಿರೋಧಿ ಪಕ್ಷಗಳ ಸಭೆ ಸೇರಿ ಜಿಲ್ಲಾ ಮಟ್ಟದಲ್ಲಿ ಪ್ರಗತಿಪರ ಜನತಂತ್ರ ರಂಗದ ಜಿಲ್ಲಾ ಘಟಕವನ್ನು ಆಯ್ಕೆ ಮಾಡಲಾಯಿತು.

ಶ್ರೀ ಬಾಬೂರಾವ್ ಚಿಂಚೋಳಿಕರ ಕಾಂಗ್ರೆಸ್(ಯು)ರನ್ನು ಮುಖ್ಯ ಸಂಚಾಲಕರನ್ನಾಗಿ, ಕಾಂ. ಸಂಗ್ರಾಮ (ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ), ಕಾಂ. ರಂಗನಾಥರಾವ್ ಸೈಗಾಂವ್‌ಕರ್(ಸಿ.ಪಿ.ಐ.), ಶ್ರೀ ಕಾಶೀನಾಥ ರಾವ್ ಬೆಲೂರೆ(ಜನತಾ) ಇವರುಗಳನ್ನು ಸಂಚಾಲಕರನ್ನಾಗಿ, ಶ್ರೀ ಡಿ. ಕ್ರಿಸ್ಟಿಯನ್‌ರನ್ನು ಕಾರ್ಯದರ್ಶಿಯಾಗಿ ಚುನಾಯಿಸಲಾಯಿತು. ಅಲ್ಲದೇ 31 ಜನರ ಕಾರ್ಯಕಾರಿ ಸಮಿತಿಯನ್ನೂ ಆಯ್ಕೆ ಮಾಡಲಾಯಿತು.

ಮೊದಲು ಚಿಕ್ಕ ಮತ್ತು ಮಧ್ಯಮ ವರ್ಗದ ರೈತರ ಸಹಕಾರಿ ಸಾಲಗಳನ್ನು ರದ್ದು ಮಾಡಿರುವದಾಗಿ ಪ್ರಕಟಿಸಿ ಈಗ ಸಾಲ ವಸೂಲಿಯನ್ನು ಪುನಃ ಆರಂಭಿಸಿರುವ ಸರ್ಕಾರದ ನೀತಿಯನ್ನು ಖಂಡಿಸಲಾಯಿತು.

ಸಗರದ ಪೊಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯ ಶ್ರೀ ಆರ್. ವಾಯ್ ಕಬಾಡೆಯುವರ ಮೇಲೆ ನಡೆದ ದಾಳಿಯನ್ನು, ವಿದ್ಯಾರ್ಥಿಗಳ ಮೇಲೆ ನಡೆದ ಲಾಠೀ ಚಾರ್ಜನ್ನು ಖಂಡಿಸಲಾಯಿತು. ಈ ವರ್ಷಾರಂಭದಲ್ಲಿ ತಲೆಯೆತ್ತಿರುವ ಸಮಸ್ಯೆಯನ್ನು ಸರ್ಕಾರ ಸುಮುಖವಾಗಿ ಬಗೆಹರಿಸಲು ಪ್ರಯತ್ನಿಸಿಲ್ಲ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಹೋರಾಟಕ್ಕಿಳಿದಿರುವ ಸಹಕಾರಿ ಸಂಸ್ಥೆಗಳ ನೌಕರರನ್ನು ಬೆಂಬಲಿಸಲಾಯಿತು.

ಬಜತ್ತೂರು

22-2-81ರಂದು ಪುತ್ತೂರು ತಾಲ್ಲೂಕಿನ ಬಜತ್ತೂರು ಗ್ರಾಮದಲ್ಲಿ ರೈತ ಸಂಘದ ಸರ್ವಸದಸ್ಯರ ಸಭೆ ನಡೆಯಿತು. ಕಾಂ. ಬಿ. ರಾಮಕೃಷ್ಣ ನೆರೆದಿದ್ದ ರೈತರನ್ನು ಉದ್ದೇಶಿಸಿ ಮಾತನಾಡಿದರು.

ನಂತರ ತಿಮ್ಮಪ್ಪಗೌಡ ಅಧ್ಯಕ್ಷರಾಗಿ, ಅಣ್ಣಯ್ಯ ಗೌಡ, ಧನಂಜಯ ಗೌಡ ಮತ್ತು ನೀಲಯ್ಯ ಗೌಡ ಇವರುಗಳು ಕಾರ್ಯದರ್ಶಿಗಳಾಗಿರುವ ರೈತ ಕಾರ್ಮಿಕ ಹೋರಾಟ ಸಮಿತಿಯನ್ನು ರಚಿಸಲಾಯಿತು.

ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಟೌನಿನಲ್ಲಿ ನೀರಿಗಾಗಿ ವಿಪರೀತ ತೊಂದರೆಯಾಗಿದ್ದರಿಂದ 23-2-81ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸುಮಾರು 400 ಜನ ಮಹಿಳೆಯರು ಖಾಲಿ ಕೊಡಗಳನ್ನು ಹಿಡಿದು ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಪುರಸಭೆಯ ಅಧಿಕಾರಿಗಳಿಗೆ ಹಾಗೂ ಅಸಿಸ್ಟೆಂಟ್ ಕಮೀಷನರರಿಗೆ ಮನವಿ ಅರ್ಪಿಸಲಾಯಿತು. ಮೆರವಣಿಗೆ ಮತ್ತು ನಿಯೋಗದ ನಾಯಕತ್ವವನ್ನು ಕಾಂ ಲಕ್ಷ್ಮಯ್ಯ, ಕಾಂತರಾಜ್, ವಿ. ರಾಮಯ್ಯ, ನಂಜಮ್ಮ ಮತ್ತು ಚಿನ್ನಮ್ಮ ಮೊದಲಾದವರು ವಹಿಸಿದ್ದರು.

ಮಡಿಕೇರಿ

28-2-81 ರಂದು ಕೊಡಗು ಜಿಲ್ಲೆಯ ಮಡಿಕೇರಿಯ ರಾಮಮಂದಿರದಲ್ಲಿ ಸಮಾವೇಶಗೊಂಡಿದ್ದ ವಿದ್ಯಾರ್ಥಿಗಳ ಸಭೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ.)ನ ತಾಲ್ಲೂಕು ಸಮಿತಿ ಸಚಿಸಲಾಯಿತು. ಅಧ್ಯಕ್ಷರಾಗಿ ಸ್ಥಳೀಯ ಸರ್ಕಾರಿ ಕಾಲೇಜಿನ ಎಚ್. ವಿ. ಸುರೇಶ್, ಕಾರ್ಯದರ್ಶಿಯಾಗಿ ಎಚ್. ಬಿ. ಬೆಳ್ಳಿಯಪ್ಪ, ಉಪಾಧ್ಯಕ್ಷರುಗಳಾಗಿ ಎಚ್. ಜಿ. ದೇವರಾಜ್ ಮತ್ತು ಶ್ರೀನಿವಾಸ್ ಆಯ್ಕೆಯಾದರು. ಸಭೆಯಲ್ಲಿ ಪಾಲ್ಗೊಂಡಿದ್ದ ಎಸ್.ಎಫ್.ಐ.ನ ರಾಜ್ಯಸಮಿತಿ ಅಧ್ಯಕ್ಷ ಕಾಂ. ಆರ್. ಜಯಕುಮಾರ್‌ರು ಎಸ್.ಎಫ್.ಐ.ನ ಧ್ಯೇಯೋದ್ದೇಶಗಳನ್ನು ವಿದ್ಯಾರ್ಥಿಗಳಿಗೆ ವಿವರಿಸಿ ಕೊಡಗು ಜಿಲ್ಲೆಯಲ್ಲಿ ಎಸ್.ಎಫ್.ಐ.ಯನ್ನು ಬಲಿಷ್ಠವಾಗಿಕಟ್ಟಿ ಬೆಳೆಸಲು ಕರೆನೀಡಿದರು.

ರಾಯಚೂರು

(8-2-81ರಂದು ರಾಯಚೂರು ಜಿಲ್ಲೆಯ ಪ್ರಗತಿಪರ ವಾರಪತ್ರಿಕೆ "ದಂಡಿಮೆ"ಯ ಬಿಡುಗಡೆಗಾಗಿ ಸಮಾರಂಭವೊಂದನ್ನು ಏರ್ಪಡಿಸಿತ್ತು. ವನಿತ ಮಂಡಳಿಯ ಅಧ್ಯಕ್ಷರಾದ ಶ್ರೀಮಂತಿ ಎಮಾಪಶುಪತಯ್ಯನವರು ಪತ್ರಿಕೆಯನ್ನು ಬಿಡುಗಡೆ ಮಾಡಿದರು.

ಕರ್ನಾಟಕ ಯುವಕ ಮಂಡಳದ ಅಧ್ಯಕ್ಷರಾದ ಶ್ರೀ ವೀರಭದ್ರಪ್ಪನವರು ಮುಖ್ಯ ಅತಿಥಿಗಳಾಗಿ ಆಗಮಿಸಿ, ಪತ್ರಿಕಾ ಸ್ವಾತಂತ್ರ್ಯ, ಸಮಾಜವಾದ ಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಅದರ ಕಲ್ಪನೆ ಬಗ್ಗೆ ಸ್ಥೂಲವಾಗಿ ವಿವರಿಸಿದರು.

ಪೂರ್ಣಿಮಾ ಯುವತಿ ಮಂಡಳಿಯ ಅಧ್ಯಕ್ಷರಾದ ಶ್ರೀಮಂತಿ ಗೀತಾ ಮರಳಸಿದ್ಧಪ್ಪನವರು ಅಧ್ಯಕ್ಷತೆವಹಿಸಿದ್ದರು.

ಕೆ.ಜಿ.ಎಫ್.

ಸುಮಾರು 75 ದಿನಗಳಿಂದ ಹೋರಾಟದಲ್ಲಿರುವ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರನ್ನು ಬೆಂಬಲಿಸಿ ಕೆ.ಜಿ.ಎಫ್.ನಲ್ಲಿ25-2-81 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಸೈಕಲ್ ಮೆರವಣಿಗೆ ಹೊರಡಿಸಲಾಗಿತ್ತು.

ಮೆರವಣಿಗೆಯ ನೇತೃತ್ವವನ್ನು ಕಾಂ. ಟಿ. ಎಸ್. ಮಣಿ, ಕಾಂ.ತಾರಾನಾಥ ಮೊದಲಾದವರು ವಹಿಸಿದ್ದರು.

o

ಕಾರ್ಮಿಕ ಐಕ್ಯತೆಯನ್ನು ಮುರಿಯುವ ಕೃತ್ಯ

"ಮಳೆಯಾಳಿಗಳು ಮತ್ತು ತಮಿಳರು ಬೆಂಗಳೂರಿನಿಂದ ಹೊರಡಬೇಕು ಇಲ್ಲವೆ ನಾವೇ ಒದ್ದೋಡಿಸುತ್ತೇವೆ" ಬಿ.ಇ.ಎಲ್., ಐಟಿಐ., ಕಾರ್ಮಿಕರ ಕಾಲೋನಿಗಳಿಗೆ ದಿಗ್ಬಂದನ ಹಾಕಿ, ಲೈಟು-ನೀರನ್ನು ಬಂದ್ ಮಾಡುತ್ತೇವೆ."ಇದು ಎನ್. ಎಸ್. ಯು.ಐ.(ಐ), ಪ್ರಧಾನ ಕಾರ್ಯದರ್ಶಿ ಶ್ರೀ ನಾಗಭೂಷಣ ಆರಾಧ್ಯ ಎಂಬವರ ಹೆಸರಿನಿಂದ ಹೊರಡಿಸಲಾದ ಕರಪತ್ರದ ಸಾರಾಂಶ ಇದು.

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಅಪೂರ್ವ ಐಕ್ಯತೆಯ ಮುರಿಯಲು ಐ.ಎನ್.ಟಿ.ಯು.ಸಿ.ಯ ನಾಯಕ ಶ್ರೀ ಎಫ್. ಎಂ. ಖಾನ್‌ರು ಶೋಚನೀಯರಾಗಿ ವಿಫಲರಾದ ನಂತರ ಕಾರ್ಮಿಕರಲ್ಲೇ ಬಾಷಾ ದ್ವೇಷ ಬಿತ್ತಲು ಪ್ರಯತ್ನ ನಡೆದಿದೆ. ರಾಷ್ಟ್ರದ ಐಕ್ಯತೆಗೇ ಭಂಗ ತರುವ ಯತ್ನ ಇದು.

ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರು ಈ ಪ್ರಯತ್ನಗಳನ್ನು ಉಗ್ರವಾಗಿ ಖಂಡಿಸಿ ಈ ಪ್ರಯತ್ನಗಳನ್ನು ನುಚ್ಚುನೂರು ಮಾಡಿ ಐಕ್ಯತೆ ಕಾಪಾಡಿಕೊಳ್ಳಬೇಕೆಂದು ಕರೆ ನೀಡಿದ್ದಾರೆ.

●

ತನಿಖಾಧಿಕಾರಿಗೆ ಚಪ್ಪಲಿ ಪ್ರಹಾರ

ಕಾಂಗ್ರೆ ಆಡಳಿತದ ವೈಖರಿ ಬೇಕೆ? ಈ ಕೆಳಗಿನ ಘಟನೆ ಸ್ಪಷ್ಟ ನಿದರ್ಶನ ನೀಡುತ್ತದೆ.

23-2-81ರಂದು ತುಮಕೂರು ತಾಲ್ಲೂಕು ಕಸಬಾ ಹೋಬಳಿ ಕಂದಾಯ ತನಿಖಾಧಿಕಾರಿ ಶ್ರೀ ಪುಟ್ಟಸ್ವಾಮಿ ಎಂಬವರನ್ನು ತುಮಕೂರು ಜಿಲ್ಲಾ ಕಾಂಗ್ರೆ ಅಧ್ಯಕ್ಷ ಜಿ. ಎಸ್. ಬಸವರಾಜು ಚಪ್ಪಲಿಯಿಂದ ಥಳಿಸಿರುವ ಘಟನೆ ವರದಿಯಾಗಿದೆ.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಾರ್ವಜನಿಕ ಮುಖಂಡರುಗಳು ವಿಚಾರಣೆ ನಡೆಸಿ ಸರ್ಕಾರಿ ನೌಕರರಿಗೆ ಸೂಕ್ತ ಪರಿಹಾರ ಒದಗಿಸಬೇಕು ಎಂದು ಸರ್ಕಾರಿ ನೌಕರರು ಮನವಿಮಾಡಿಕೊಂಡಿದ್ದಾರೆ.

ನಡೆದಿರುವ ಗೂಂಡಾಕೃತ್ಯಕ್ಕೆ ಪ್ರತಿಭಟನೆ ಸೂಚಿಸಲು ಸರ್ಕಾರಿ ನೌಕರರು 26-2-81ರಂದು ಲೇಖಣಿ ಸ್ಥಗಿತ (PEN DOWN STRIKE) ಚಳುವಳಿ ಮಾಡಿದರು.

o

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ವೈದ್ಯ ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ

ಸುಮಾರು ದಿನಗಳಿಂದ ಕ್ಯಾಪಿಟೇಶನ್ ಫೀ ಪದ್ಧತಿಯ ವಿರುದ್ಧ ಶಾಂತಿಯುತ ಹೋರಾಟ ನಡೆಸುತ್ತಿರುವ ವೈದ್ಯ ವಿದ್ಯಾರ್ಥಿಗಳ ಮನವಿಗೆ ಸರ್ಕಾರ ಇನ್ನೂ ಕಿವಿಕೊಟ್ಟಿಲ್ಲ. ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸುವ ಬದಲು ನ್ಯಾಯಯುತ ಹೋರಾಟವನ್ನು ಸದೆಬಡಿಯುತ್ತಿರುವ ಸರ್ಕಾರದ ಕ್ರಮವನ್ನು ಎಸ್. ಎಫ್.ಐ. ರಾಜ್ಯಸಮಿತಿಯ ಉಪಾಧ್ಯಕ್ಷ ಕಾಂ. ಎನ್. ರಾಜಣ್ಣ ಉಗ್ರವಾಗಿ ಖಂಡಿಸಿದ್ದಾರೆ.

ಬೆಂಗಳೂರಿನಿಂದ ಹೊರಡಿಸಿರುವ ಪತ್ರಿಕಾ ಪ್ರಕಟನೆಯೊಂದರಲ್ಲಿ ಅವರು ಈ ವಿಷಯ ತಿಳಿಸುತ್ತಾ, ವೈದ್ಯ ವಿದ್ಯಾರ್ಥಿಗಳ ಹೋರಾಟಕ್ಕೆ ರಾಜ್ಯದ ಇಡೀ ವಿದ್ಯಾರ್ಥಿ ಸಮುದಾಯ ಬೆಂಬಲ ನೀಡಬೇಕು. ಎಂದು ಕರೆ ಕೊಟ್ಟಿದ್ದಾರೆ. ಈಗ ವೈದ್ಯ ವಿದ್ಯಾರ್ಥಿಗಳು ಪ್ರಾರಂಭಿಸಿರುವ ಅನಿರ್ದಿಷ್ಟ ಅವಧಿಯ ಮುಷ್ಕರಕ್ಕೆ ತಮ್ಮ ಬೆಂಬಲ ಸೂಚಿಸಿದ್ದಾರೆ.

ಎಸ್.ಎಫ್.ಐ.ನ ಬೆಂಗಳೂರು ಘಟಕ ವೈದ್ಯ ವಿದ್ಯಾರ್ಥಿಗಳ ಹೋರಾಟದ ಬೆಂಬಲವಾಗಿ, ಈಗಾಗಲೇ ಪ್ರಾರಂಭಿಸಲಾಗಿರುವ ಉಪವಾಸ ಸತ್ಯಾಗ್ರಹದಲ್ಲಿ ಒಂದು ದಿನ ಪಾಲ್ಗೊಳ್ಳಲಿದ್ದಾರೆ.

o

ಪೋಲೀಸ್ ದಾಳಿ

ಬಿಜಾಪುರದ ಮಾಜೀ ನಗರಾಧ್ಯಕ್ಷರಾದ ಜಗದೀಶ್ ಯಂಶಮೋಲಿಯವರ ಅಂಗಡಿಯನ್ನು ಪೋಲೀಸರು ಸೂರೆಮಾಡಿರುವ ವರದಿ ಬಂದಿದೆ.

ಗಲ್ಲಾಪೆಟ್ಟಿಗೆಯನ್ನು (ಚಿಲ್ಲರೆ 5 ಪೈಸೆಯನ್ನೂ ಬಿಡದೇ)ತಮ್ಮ ಜೊತೆಗೆ ಕೊಂಡೊಯ್ದಿದ್ದಾರೆ. ಯಾವುದೇ ಜಪ್ತೀ ವಾರೆಂಟ್ ತೋರಿಸದೇ ಪೋಲಿಸರು ಈ ಕೆಲಸಮಾಡಿದ್ದಾರೆ. ಸಾವಿರಾರು ರೂ. ಹಣವನ್ನು ದೋಚಿರುವ ಪೋಲೀಸರ ಮೇಲೆ ಉಗ್ರಕ್ರಮ ಕೈಗೊಳ್ಳಬೇಕೆಂದು ಜಗದೀರ ಯಂಶಮೋಲಿ ಕೋರಿದ್ದಾರೆ.

o

'ಮೀಸಲಾತಿ ವಿರೋಧದ ಚಳುವಳಿ ಬೆಂಬಲಿಸಲಾರೆ'

ಗುಜರಾತ್ ರಾಜ್ಯದಲ್ಲಿನ ವೈದ್ಯಕೀಯ ವಿದ್ಯಾರ್ಥಿಗಳು ನಡೆಸುತ್ತಿರುವ ಮೀಸಲಾತಿ ವಿರೋಧದಂತಹ ಚಳುವಳಿಗಳನ್ನು ತಾವು ಬೆಂಬಲಿಸುವುದಿಲ್ಲ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯ ಹಾಗೂ ಪ. ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ಅವರು ತಿಳಿಸಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರನ್ನು ಉದ್ದೇಶಿಸಿ ಮುಖ್ಯಮಂತ್ರಿ ಬಸು, ಸಾವಿರಾರು ವರ್ಷಗಳಿಂದ ಆರ್ಥಿಕ-ಸಾಮಾಜಿಕ ಮತ್ತು ಶೈಕ್ಷಣಿಕ ಹಕ್ಕುಗಳಿಂದ ವಂಚಿತರಾದ ಹಿಂದುಳಿದ ಜಾತಿ, ಪರಿಶಿಷ್ಟ ವರ್ಗಗಳ ಹಿತಾಸಕ್ತಿಗೆ ಧಕ್ಕೆ ತರುವಂತಹ ಯಾವುದೇ ತೆರನಾದ ಚಳುವಳಿಗೆ ತಾವು ಮತ್ತು ತಮ್ಮ ಪಕ್ಷ ಬೆಂಬಲ ಕೊಡುವುದಿಲ್ಲ ಎಂದು ಘೋಷಿಸಿದರು. ಹಿಂದುಳಿದ ಜಾತಿ ಮತ್ತು ಹರಿಜನ ಗಿರಿಜನರಿಗೆ ಮೀಸಲಾತಿ ಹಾಗೂ ವಿಶೇಷ ಸವಲತ್ತುಗಳು ಮುಂದುವರಿಯಬೇಕು ಮತ್ತು ಹೆಚ್ಚಾಗಬೇಕೆಂಬುದೇ ತಮ್ಮ ಪಕ್ಷದ ನಿಲುವು ಎಂದು ಬಸು ನುಡಿದರು.

ಸುಭದ್ರ ಸರ್ಕಾರ ಕಾಂಗೈನಿಂದ ಸಾಧ್ಯವಿಲ್ಲ

"ದೇಶಕ್ಕೆ ಸುಭದ್ರ ಸರ್ಕಾರ ಕೊಡುವೆನೆಂದು ಜನತೆಗೆ ಭರವಸೆ ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ (ಐ) ಪಕ್ಷದಿಂದ ಅದು ಸಾಧ್ಯವಾಗಿಲ್ಲ. ಯಾಕೆಂದರೆ ಆ ಪಕ್ಷ ಅನುಸರಿಸಿಕೊಂಡು ಬರುತ್ತಿರುವ ಬಂಡವಾಳಶಾಹಿ ಮತ್ತು ಜಮೀನ್ದಾರರ ಪರವಾದ ಆರ್ಥಿಕ ನೀತಿಗಳೇ ಕಾರಣ. ಈ ನೀತಿಗಳಿಂದಾಗಿ ಬೆಲೆಏರಿಕೆ, ಹಣದುಬ್ಬರ, ಕೊರತೆ ಬಜೆಟ್ ಮುಂತಾದ ಮತ್ತು ನಿರುದ್ಯೋಗ ಸಮಸ್ಯೆಗಳು ಉಂಟಾಗುವುದು. ಈ ಸಮಸ್ಯೆಗಳನ್ನು ಪರಿಹರಿಸಬೇಕೆಂದು ಜನರು ಚಳುವಳಿಗಳನ್ನು ಹೂಡುತ್ತಾರೆ. ಸರ್ಕಾರವು ಸಮಸ್ಯೆಗಳನ್ನು ಬಗೆಹರಿಸದೆ ಜನತೆಯನ್ನು ದಮನ ಮಾಡುತ್ತಿದೆ. ಕರಾಳ ಶಾಸನಗಳನ್ನು ಜಾರಿ ಮಾಡುತ್ತದೆ" ಎಂದು ಹೇಳಿದ ಕಾಂ. ಬಸು, ನಮ್ಮ ದೇಶದಲ್ಲಿ ಇದೆಲ್ಲಾ ನಡೆಯುತ್ತಿದೆ ಎಂದರು. ರಾಷ್ಟ್ರೀಯ ಭದ್ರತಾ ಶಾಸನದ ಜಾರಿ, ಜೀವವಿಮಾ ನೌಕರರ ವೇತನ ಕಡಿತದ ಸುಗ್ರೀವಾಜ್ಞೆಯನ್ನು ತಮ್ಮ ವಿಶ್ಲೇಷಣೆಯ ಸಾಕ್ಷಿಯಾಗಿ ಕಾಂ. ಬಸು ಬಳಸಿಕೊಂಡರು.

ಕಾಂಗ್ರೆಸ್(ಐ) ಪಕ್ಷವು ಸರ್ಕಾರ ನಡೆಸುತ್ತಿರುವ ಬಹುತೇಕ ರಾಜ್ಯಗಳಲ್ಲಿ ಹಿಂದೂ-ಮುಸ್ಲಿಂ ಗಲಭೆ, ಹರಿಜನರ ಮೇಲೆ ದಬ್ಬಾಳಿಕೆ ಮತ್ತು ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ನೋಡಿದರೆ ಈ ದೇಶದಲ್ಲಿ ಕಾನೂನು ಮತ್ತು ಶಿಸ್ತುಪಾಲನೆ ಇದೆ ಎಂದು ಯಾರಾದರೂ ಹೇಳಲು ಸಾಧ್ಯವೆ ಎಂದು ಜ್ಯೋತಿಬಸು ಪ್ರಶ್ನಿಸಿದರು. ಬಂಗಾಳದಲ್ಲಿ ಸಾಧಿಸಿರುವ ಹಲವಾರು ಜನಹಿತ ಸಾಧನೆಗಳನ್ನು ವಿವರವಾಗಿ ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು ಈ ಒಳ್ಳೆಯ ಕೆಲಸಗಳಿಂದ ಸಿ.ಪಿ.ಐ.(ಎಂ) ಪಕ್ಷವು ಖ್ಯಾತಗೊಂಡು ದೇಶದ ಇತರೆಡೆಗೂ ತನ್ನ ಪ್ರಭಾವಬೀರಬಹುದೆಂಬ ಭೀತಿಯಿಂದ ಕೇಂದ್ರಸರ್ಕಾರ ಮತ್ತು ಕಾಂಗ್ರೆಸ್ (ಐ) ಪಕ್ಷವು ತಮ್ಮ ವಾಮಪಂಥೀಯ ಸರ್ಕಾರವನ್ನು ಉರುಳಿಸಲು ಹಲವಾರು ಪ್ರಯತ್ನಗಳನ್ನು ಮಾಡುತ್ತಲಿದೆಯಲ್ಲದೆ ಕೊಲೆ ರಾಜಕಾರಣಕ್ಕೂ ಕೈಹಾಕಿದೆ ಎಂದು ಬಸು ಆಪಾದಿಸಿದರು. ಕಾಂಗೈನವರು ತಮ್ಮ ಪಕ್ಷದ 18 ಜನರನ್ನು ಕೊಲೆ ಮಾಡಿದ್ದು ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತುಪಾಲನೆ ಸಮಸ್ಯೆಯನ್ನು ತಂದೊಡ್ಡಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ವಿದ್ಯಾರ್ಥಿ ಸಂಘ ಏರ್ಪಡಿಸಿದ್ದ ಈ ಸಭೆಯ ಅಧ್ಯಕ್ಷತೆಯನ್ನು ಪ್ರಸಿದ್ಧ ಅರ್ಥಶಾಸ್ತ್ರಜ್ಞ ಡಾ. ಕೆ. ವೆಂಕಟಗಿರಿಗೌಡ ಅವರು ವಹಿಸಿದ್ದರು. ಸಂಘದ ಕಾರ್ಯದರ್ಶಿ ಎಸ್. ಜಾಫೆಟ್ ಸ್ವಾಗತಿಸಿದರು. ಅಧ್ಯಕ್ಷ ತಿಮ್ಮೇಗೌಡ ಅವರು ವಂದಿಸಿದರು.

ಮಾತೃಭಾಷೆಗೇ ಆದ್ಯತೆ

ಮಕ್ಕಳಿಗೆ ಮಾತೃಭಾಷೆಯಲ್ಲೇ ಶಿಕ್ಷಣ ಒದಗಿಸಲು ತಮ್ಮ ಸರ್ಕಾರವು ಇಂಗ್ಲೀಷ್ ಭಾಷೆಯನ್ನು ಪ್ರಾಥಮಿಕ ಹಂತದಲ್ಲಿ ಸಂಪೂರ್ಣವಾಗಿ ರದ್ದುಗೊಳಿಸಿದೆ ಎಂದು ಪ. ಬಂಗಾಳದ ಮುಖ್ಯಮಂತ್ರಿ ಕಾಂ. ಜ್ಯೋತಿಬಸು ತಿಳಿಸಿದರು.

'ಪಶ್ಚಿಮ ಬಂಗಾಳದಲ್ಲಿ ಶೈಕ್ಷಣಿಕ ನೀತಿ' ಎಂಬ ವಿಷಯದ ಮೇಲೆ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಉಪನ್ಯಾಸವೊಂದನ್ನು ಮಾಡುತ್ತಿದ್ದ ಬಸು ಅವರು ಭಾರತೀಯ ಭಾಷೆಗಳಿಗೆ ಅಪಮಾನ ಕುಂದು ಬರುವಂತಹ ಯಾವುದೇ ಚಳುವಳಿಯನ್ನು ತಾವು ಸಹಿಸುವುದಿಲ್ಲ ಎಂದರು.

ಇಂಗ್ಲೀಷ್ ಭಾಷೆಯನ್ನು ತಮ್ಮ ಸರ್ಕಾರವು ಸಂಪೂರ್ಣವಾಗಿ ವಿರೋಧಿಸುವುದಿಲ್ಲ ಎಂದ ಬಸು ಅವರು ಆ ಭಾಷೆಯ ಕಲಿಕೆಗೆ ತಮ್ಮ ರಾಜ್ಯದಲ್ಲಿ 6 ರಿಂದ 12ನೇ ತರಗತಿಗಳಲ್ಲಿ ಅವಕಾಶವಿದೆ ಎಂದರು.

ಪದವಿ ಮತ್ತು ಪದವಿ ಪೂರ್ಣ ಶಿಕ್ಷಣದಲ್ಲಿ ವಿದ್ಯಾರ್ಥಿಯು ಬಯಸುವ ಯಾವುದೇ ಭಾಷೆಯ ಶಿಕ್ಷಣಕ್ಕೆ ತಮ್ಮ ಸರ್ಕಾರವು ಅವಕಾಶ ಮಾಡಿಕೊಟ್ಟಿದೆ ಎಂದು ಬಸು ನುಡಿದರು.

ಜಪಾನ್, ಚೀನ, ಫ್ರಾನ್ಸ್, ರಷ್ಯಾ ಮುಂತಾದ ದೇಶಗಳಲ್ಲಿ ಆಯಾ ದೇಶ ಭಾಷೆಗಳಲ್ಲಿಯೇ ಶಿಕ್ಷಣ ಸೌಲಭ್ಯ ದೊರೆಯುತ್ತಿದ್ದು ಭಾರತದಲ್ಲೂ ಭಾರತೀಯ ಭಾಷೆಗಳಲ್ಲೇ ಸಂಪೂರ್ಣ ಶಿಕ್ಷಣ ಸಿಕ್ಕುವಂತಹ ವ್ಯವಸ್ಥೆಗೆ ತಮ್ಮ ಒಲವು ಎಂದು ಬಸು ತಿಳಿಸಿದರು.

ರಾಷ್ಟ್ರ ಭಾಷೆಯ ಬಗ್ಗೆ ಪ್ರಸ್ತಾಪಿಸಿದ ಬಸು ಅವರು ಹಿಂದಿ ಹೇರಿಕೆಯನ್ನು ತಾವು ಒಪ್ಪುವುದಿಲ್ಲ ಎಂದರಲ್ಲದೆ ಹಿಂದಿ ಜತೆಗೆ ಇಂಗ್ಲೀಷ್ ಕೇಂದ್ರದ ಸಂಪರ್ಕ ಭಾಷೆಯಾಗಿ ಮುಂದುವರಿಯಲಿ ಎಂದರು.

ಉಚಿತ ಶಿಕ್ಷಣ

ತಮ್ಮ ರಾಜ್ಯದಲ್ಲಿ ಪಿ.ಯು.ಸಿ. ಮಟ್ಟದವರೆಗೆ ಉಚಿತ ಶಿಕ್ಷಣವನ್ನು ಕೊಡುತ್ತಿದ್ದು, 5ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೆ ಸರ್ಕಾರವು ಪುಕ್ಕಟೆಯಾಗಿ ಪುಸ್ತಕಗಳನ್ನು ಮತ್ತು ಮಧ್ಯಾಹ್ನದ ಉಪಹಾರವನ್ನು ಒದಗಿಸುತ್ತಿದೆ ಎಂದು ಬಸು ಹೇಳಿದರು.

ಕಳೆದ ನಾಲ್ಕು ವರ್ಷಗಳ ತಮ್ಮ ಅಧಿಕಾರವಧಿಯಲ್ಲಿ 35,000 ಹೊಸ ಶಾಲೆಗಳನ್ನು ತೆರೆದಿದ್ದು ಇನ್ನೊಂದು ವರ್ಷದಲ್ಲಿ ತಮ್ಮ ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಶಾಲೆಗಳನ್ನು ತಮ್ಮ ಸರ್ಕಾರ ತೆರೆಯಲಿದೆ ಎಂದು ಬಸು ನುಡಿದರು.

ಅರಾಜಕತೆಯ ಅಂತ್ಯ

ತಮ್ಮ ವಾಮಪಂಥೀಯ ರಂಗ ಅಧಿಕಾರ ವಹಿಸಿಕೊಳ್ಳುವ ಮುನ್ನ ಶೈಕ್ಷಣಿಕ ರಂಗದಲ್ಲಿ ಅರಾಜಕತೆ ಇತ್ತು. ಪರೀಕ್ಷೆಗಳು ಯಾವಾಗ ಜರುಗುತ್ತವೆ? ಫಲಿತಾಂಶಗಳು ಯಾವಾಗ ಹೊರಬೀಳುತ್ತವೆ ಎಂಬ ಸಂಗತಿ ಯಾರಿಗೂ ತಿಳಿಯುತ್ತಿರಲಿಲ್ಲ. ವಿದ್ಯಾರ್ಥಿ ಸಮುದಾಯದಲ್ಲಿ ಸಾಮೂಹಿಕ ಕಾಪಿ ಹೊಡೆಯುವ ಅಭ್ಯಾಸವಿತ್ತು. 1971 ಮತ್ತು 77ರ ನಡುವೆ ಒಬ್ಬನೇ ಒಬ್ಬ ಎಂ. ಬಿ. ಬಿ. ಎಸ್. ಡಾಕ್ಟರ್ ತಯಾರಾಗಲಿಲ್ಲ.

ಇಂತಹ ಅರಾಜಕ ಪರಿಸ್ಥಿತಿಯನ್ನು ತಮ್ಮ ಸರ್ಕಾರವು ವಿದ್ಯಾರ್ಥಿ ಸಂಘಗಳ, ಉಪಾಧ್ಯಾಯರುಗಳ ಸಂಘಗಳ ಹಾಗೂ ಪೋಷಕರ ಸಹಕಾರದಿಂದ ಸಂಪೂರ್ಣವಾಗಿ ಅಂತ್ಯಗೊಳಿಸಿ ಶೈಕ್ಷಣಿಕ ರಂಗದಲ್ಲಿ ಶಾಂತಿ ಸ್ಥಾಪಿಸಿದೆ ಎಂದು ಬಸು ಅವರು ಅಭಿಮಾನದಿಂದ ಹೇಳಿದರು.

ರಾಜ್ಯದ ಆದಾಯದಲ್ಲಿ ಶೇ. 17 ರಷ್ಟನ್ನು ತಮ್ಮ ಸರ್ಕಾರವು ಶಿಕ್ಷಣಕ್ಕಾಗಿ ವೆಚ್ಚ ಮಾಡುತ್ತಿದೆ ಎಂದು ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸುತ್ತ ಬಸು ಹೇಳಿದರು.

ಇನ್‌ಸ್ಟಿಟ್ಯೂಟಿನ ಆಡಳಿತಾಧಿಕಾರಿ ಕೆ. ಆರ್. ರಾಮಚಂದ್ರನ್ ಸ್ವಾಗತಿಸಿದರು. ಡೀನ್ ಅವರಾದ ಪ್ರೊ. ಬಿ. ಕೆ. ಚಂದ್ರಶೇಖರ್ ವಂದಿಸಿದರು.

ಪ್ರಗತಿಪರ ಜನತಂತ್ರರಂಗದ ಆಶ್ರಯದಲ್ಲಿ ಕುಂದಾಪುರದಲ್ಲಿ ಬೃಹತ್ ಸಭೆ-ಮೆರವಣಿಗೆ

ದ.ಕ. ಜಿಲ್ಲೆಯ ಕುಂದಾಪುರದಲ್ಲಿ ತಾರೀಕು 3-3-1981ನೇ ಮಂಗಳವಾರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಯು) ಮತ್ತು ಲೋಕದಳ, ಈ ನಾಲ್ಕು ಪಕ್ಷಗಳು ರಚಿಸಿಕೊಂಡ ಪ್ರಗತಿಪರ ಜನತಂತ್ರರಂಗದ ನೇತೃತ್ವದಲ್ಲಿ ರೈತ-ಕಾರ್ಮಿಕರ ಬೃಹತ್ ಮೆರವಣಿಗೆ ಮತ್ತು ಸಭೆ ನಡೆಯಿತು. ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ರೈತ-ಕೃಷಿ ಕೂಲಿಗಾರರು ಭಾಗವಹಿಸಿತ್ತಾರೆ.

ಪ್ರಗತಿಪರ ಜನತಂತ್ರರಂಗದ ಕುಂದಾಪುರ ತಾಲ್ಲೂಕು ಸಮಿತಿಯ ಸಂಚಾಲಕರಾದ ಶ್ರೀ ಮಾಣಿ ಗೋಪಾಲನವರು ಆರಂಭದಲ್ಲಿ ಎಲ್ಲರನ್ನು ಸ್ವಾಗತಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ನಾಯಕರಾದ ಶ್ರೀ ಡಿ. ಬಿ. ಚಂದ್ರೇಗೌಡ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಕರ್ನಾಟಕ ರಾಜ್ಯದ ರೈತಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕಾಂ. ಪಿ. ರಾಮಚಂದ್ರರಾವ್‌ರವರು ಮಾತನಾಡುತ್ತ ತನ್ನಷ್ಟಕ್ಕೆ ತಾನೇ ಹುಟ್ಟಿಕೊಂಡರೂ ಸಹ ರೈತರ ಹೋರಾಟ ಇತ್ತೀಚೆಗೆ ಸಂಘಟಿತ ರೂಪ ತಳೆಯುತ್ತಿದೆ ಹಾಗೂ ನಾಲ್ಕು ಪಕ್ಷಗಳು ರಚಿಸಿಕೊಂಡ ಸಮಿತಿಗಳ ಮೂಲಕ ದುಡಿಯುವ ಜನರ ಹೋರಾಟಕ್ಕೆ ಸ್ಫೂರ್ತಿಯನ್ನು ತುಂಬಿ, ವಿಶಾಲ ಹೋರಾಟವನ್ನು ಬೆಳೆಸಲು ಸಾಧ್ಯವಾಗಿದೆ. ಈ ಮೂಲಕ ಕಾರ್ಮಿಕರು ಮತ್ತು ರೈತರು ಹಾಗೂ ಎಲ್ಲ ಶ್ರಮಜೀವಿಗಳು ಒಗ್ಗಟ್ಟಾಗಿ ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ರಾಜ್ಯ ವಿವಿಧ ಜಿಲ್ಲೆಗಳಲ್ಲಿ ವಿರೋಧ ಪಕ್ಷಗಳ ನೇತೃತ್ವದಲ್ಲಿ ಬಲವಾದ ಚಳವಳಿಯನ್ನು ನಡೆಸಬೇಕಾಗಿದೆ ಎಂದು ಹೇಳಿದರು.

ಅನಂತರ ಬೈಂದೂರ್ ಕ್ಷೇತ್ರದ ವಿಧಾನಸಭಾ ಸದಸ್ಯರಾದ ಶ್ರೀ ಎ.ಜಿ. ಕೊಡ್ಗಿ, ಲೋಕದಳ ನಾಯಕ ಅಮ್ಮೆಂಬಳ ಬಾಳಪ್ಪ, ಭಾರತ ಕಮ್ಯುನಿಸ್ಟ್ ಪಕ್ಷದ ನಾಯಕ ವಿಶ್ವನಾಥ ನಾಯಕ್, ದಕ್ಷಿಣ ಕನ್ನಡ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಯು. ಜನಾರ್ಧನ ನಾಯಕ್, ಕಾಂಗ್ರೆಸ್ (ಯು) ಪಕ್ಷದ ನಾಯಕರಾದ ಆನಂದ ಕುಂದ ಹೆಗ್ಡೆ ಮತ್ತು ಬಾಲಕೃಷ್ಣಶೆಟ್ಟಿ ಮೊದಲಾದವರು ಮಾತನಾಡುತ್ತಾ ಸರ್ಕಾರದ ರೈತ-ಕಾರ್ಮಿಕ ವಿರೋಧಿನೀತಿಗಳನ್ನು ಖಂಡಿಸಿ, ರೈತರ ಸಾಲ ಮನ್ನಾ ಮಾಡುವ ಪೊಳ್ಳು ಘೋಷಣೆಯನ್ನೂ ಕಂದಾಯ ರದ್ದುಗೊಳಿಸುವ ಸುಳ್ಳು ಆಶ್ವಾಸನೆಯನ್ನೂ ಪ್ರಕಟಿಸಿದ ಕರ್ನಾಟಕ ಸರ್ಕಾರ ಈಗ ಪುನಃ ಸಾಲ ಮತ್ತು ಕಂದಾಯ ವಸೂಲಿಗೆ ರೈತರ ಮನೆಯ ಸೊತ್ತುಗಳನ್ನು ಹರಾಜುಮಾಡುವ ಕ್ರೂರ ಕ್ರಮ ಕೈಗೊಂಡಿದೆ. ನ್ಯಾಯ, ನೀತಿಯ ಗೊತ್ತುಗುರಿ ಇಲ್ಲದೆ ಸರಕಾರದ ಆಡಳಿತ ಸಂಪೂರ್ಣ ವಿಫಲವಾಗಿದೆ ಎನ್ನುತ್ತಾ ರೈತ-ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹಾಗೂ ಬದುಕಿಗಾಗಿ ಹೋರಾಟವನ್ನು ನಡೆಸುವಾಗ, ಪ್ರತಿಗಾಮಿ ಶಕ್ತಿಗಳು ಜೊತೆಗೂಡಿ ಹೋರಾಟಗಳನ್ನು ಹತ್ತಿಕ್ಕಲು ಯತ್ನಿಸಿದಾಗ ಜನತೆಯು ಪ್ರತಿಗಾಮಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸಲು ಮುಂದಾಗಬೇಕಾಗಿದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಕಾಂಗ್ರೆಸ್ (ಯು) ಪಕ್ಷದ ನಾಯಕ ಶ್ರೀ ಡಿ. ಬಿ. ಚಂದ್ರೇಗೌಡರು ಮಾತನಾಡುತ್ತಾ ಪ್ರಜಾಪ್ರಭುತ್ವದ ಉಳಿವಿಗಾಗಿ ಜನಜಾಗೃತಿಗೊಳಿಸಿ, ರೈತ ಕಾರ್ಮಿಕರ ಹಿತಸಾಧನೆಗಾಗಿ ಪ್ರತಿಪಕ್ಷಗಳು ಒಟ್ಟಾಗಿ ಹೋರಾಟವನ್ನು ರೂಪಿಸಲು ಮುಂದಾಗಿವೆ. ಇದು ಆರೋಗ್ಯಕರ ಬೆಳವಣಿಗೆ ಎಂದು ಹೇಳಿದರು. ತೋರುವಿಕೆಗಾಗಿ ಉದ್ದುದ್ದದ ಹೇಳಿಕೆಯನ್ನಿತ್ತರೂ, ಬೆಳೆದು ಬರುತ್ತಿರುವ ಹೋರಾಟಗಳಿಂದ ಅಧಿಕಾರ ಸ್ಥಾನದಲ್ಲಿರುವವರಿಗೆ ಭಯ ಹೆಚ್ಚಿದೆ. ರೈತರ ಜಾಥಾಗಳನ್ನು ವಿಫಲಗೊಳಿಸಲು ಪ್ರಯತ್ನವೂ ನಡೆಯಿತು; ಆದರೆ ಫಲಕಾರಿಯಾಗಲಿಲ್ಲ ಹಾಗೂ ಜನತೆಯ ಪ್ರತಿಭಟನೆಯನ್ನು ತಡೆಯುವುದು ಸಾಧ್ಯವಿಲ್ಲ ಎಂಬುದನ್ನು ಕಾಂಗೈ ಸರ್ಕಾರ ಇತ್ತೀಚೆಗೆ ಕಂಡುಕೊಂಡಿದೆ. ರಾಜ್ಯದ ದುಡಿಯುವ ಜನವಿಭಾಗದ ಹೋರಾಟಕ್ಕೆ ಹೊಸ ತಿರುವು ನೀಡುವುದಕ್ಕಾಗಿ ನಾಲ್ಕು ಪಕ್ಷಗಳುಒಂದಾಗಿ ಹೋರಾಟ ನಡೆಸಲು ನಿರ್ಧಾರ ಕೈಗೊಂಡಿವೆ ಎಂದು ಹೇಳಿದರು.

ದ. ಕ. ಜಿಲ್ಲಾ ರೈತಸಂಘದ ಅಧ್ಯಕ್ಷರಾದ ಕಾಂ. ಅಬ್ರಹಾಂಕರ್ಕಡರವರು ಕೊನೆಯಲ್ಲಿ ಧನ್ಯವಾದವನ್ನು ಅರ್ಪಿಸಿದರು. ಸಭೆ ಮುಗಿದ ಬಳಿಕ ಕುಂದಾಪುರ ಸಮುದಾಯ ತಂಡದವರಿಂದ "ಹೊಸ ಬಾಳಿನೆಡೆಗೆ" ಮತ್ತು "ಒಂದು ಪರ್ಮಿಟಿನ ಕಥೆ" ಎಂಬ ಎರಡು ನಾಟಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ವರದಿ : ಕೆ. ಶಂಕರ್

ಮಹಿಳೆಯನ್ನು ಕುರಿತು

(ಹಿಂದಿನ ಸಂಚಿಕೆಯಿಂದ)

ಮುಂದೆ ಇದೆಷ್ಟು ಅಗಾಧ ಮಾನ್ಯತೆಯನ್ನು ಪಡೆದುಕೊಂಡಿತೆಂದರೆ ಹೆಣ್ಣು ಗೌರವಾರ್ಹಳಾಗಬೇಕಾದರೆ ಸಮಾಜದಲ್ಲಿ ಇದು ಅತ್ಯವಶ್ಯಕವೆನ್ನುವಂತಾಯಿತು. ಒಬ್ಬ ಹೆಣ್ಣಿಗೆ ಗಂಡನೊಬ್ಬನೇ ಆಗಬೇಕಾದ್ದರಿಂದ ಮುಂದೆ ಆ ಗಂಡ ಸತ್ತರೆ ಅವಳು ಹಾಗೇ ಜೀವನ ಸವೆಸಬೇಕಾದ ವೈಧವ್ಯ ಪದ್ಧತಿ ಜಾರಿಗೆ ಬಂದಿತು. ಅಷ್ಟೇ ಅಲ್ಲ, ಹೆಣ್ಣಿನ ನಿಷ್ಠೆಯನ್ನು ವೈಭವಿಸಿ, ಗಂಡ ಸತ್ತ ಮೇಲೆ ಬಾಳು ನಿಷ್ಫಲ ಎಂದುಕೊಂಡು ಸಹಗಮನ ಮಾಡುವುದನ್ನೂ ಕಲಿಸಲಾಯಿತು. ಈ ಸಾಮಾಜಿಕ ನಿರ್ಬಂಧಗಳನ್ನು ಅನಿವಾರ್ಯಗೊಳಿಸುವುದರಲ್ಲಿ ಹೆಣ್ಣಿ ಆರ್ಥಿಕ ದುರ್ಬಲತೆ ಹೆಚ್ಚು ಸಹಾಯ ಮಾಡಿತು. ಇದು ಇದು ಆದರ್ಶ, ಇದೇ ಪೂಜ್ಯತೆ ಎಂದು ಬೆನ್ನು ತಟ್ಟಿದಾಗ ಸ್ತ್ರೀಯರೂ ಇದನ್ನು ನಂಬಿ ಇದನ್ನೇ ಜೀವನದ ಪರಮಧ್ಯೇಯವನ್ನಾಗಿ ಮಾಡಿಕೊಂಡರು. ಪಾತಿವ್ರತ್ಯ, ವೈಧವ್ಯ, ಸಹಗಮನ ಇವೆಲ್ಲವೂ ಬರಿಯ ಶಬ್ದ ಮೋಹ, ಬರಿಯ ಶಬ್ದ ಜಾಲ ಎನ್ನುವ ಎಚ್ಚರವೂ ಕೂಡ ಬರದಂತೆ ಸಮಾಜ ವ್ಯವಸ್ಥೆ ಬಲಿಯಿತು. ಸಹಗಮನ, ವೈಧವ್ಯ ಇವುಗಳ ಸಾಮಾಜಿಕ ಹಿನ್ನೆಲೆ, ಕಾರಣಗಳನ್ನು ನಿಷ್ಠುರವಾಗಿ ಪರಿಶೀಲಿಸದೆ, ಈಗಲೂ ಅನೇಕ ಇತಿಹಾಸಕಾರರು ಇವುಗಳನ್ನು ಗೌರವದಿಂದ, ಗದ್ಗದ ಕಂಠದಿಂದ ಪ್ರಸ್ತಾಪಿಸುತ್ತಾರೆ.

ಆದರ್ಶದ ಅಮಲು ತಲೆಗೇರಿದಾಗ ಹೆಣ್ಣು ಇದನ್ನೇ ಜಗತ್ತಿನ ನಿಯಮವೆಂದು ಭಾವಿಸಿದಳು. ಯಾವ ಆರ್ಥಿಕ ಕ್ರಿಯೆಯಲ್ಲೂ ಭಾಗವಹಿಸದಿದ್ದ ಹೆಣ್ಣಿಗೆ ಮುಂದೆ ಯಾವ ಬೌದ್ಧಿಕ ಕ್ರಿಯೆಯಲ್ಲೂ ಪಾಲು ದೊರೆಯಲಿಲ್ಲ. ವಿದ್ಯಾರ್ಜನೆ ಹೆಣ್ಣಿಗೆ ಅನವಶ್ಯಕ ಎಂದುಕೊಂಡು ಅದರಿಂದಲೂ ಅವಳನ್ನು ದೂರವಿಟ್ಟರು. ಕೇವಲ ಗೌರವಿಸಲ್ಪಡುವ ಗೊಂಬೆಯಾದ ಹೆಣ್ಣು ಸ್ಪೃಶ್ಯಅಂತ್ಯಜಳಾಗಿ ಮಾರ್ಪಟ್ಟದ್ದರಲ್ಲಿ ಆಶ್ಚರ್ಯವೇನಿಲ್ಲ. ಸಮಾಜದ ಎಲ್ಲ ವ್ಯತ್ಯಾಸಗಳನ್ನು, ಸ್ಥಿತಿಗತಿಗಳನ್ನು ಇದೇ ಜಗತ್ತಿನ ಸತ್ಯ ಎಂದು ಪ್ರತಿಪಾದಿಸಲು ಹುಟ್ಟಿಕೊಂಡ ಎಲ್ಲ ಧರ್ಮಶಾಸ್ತ್ರಗಳೂ ಹೆಣ್ಣಿನ ಈ ಸ್ಥಾನವನ್ನು ಖಚಿತಗೊಳಿಸಲು ಸಹಾಯಮಾಡಿದವು. ಖಡಾಖಂಡಿತವಾಗಿ ಸ್ತ್ರೀಗೆ ಸ್ವಾತಂತ್ರ್ಯ ಕೊಡಬಾರದು ಎಂದು ಹೇಳಿ, ಇದರ ನಷ್ಟವನ್ನು ಮರೆಸಿ, ಆದರ್ಶೀಕರಿಸಲು ಎಲ್ಲಿ ನಾರಿಯರು ಪೂಜೆಗೊಳ್ಳುತ್ತಾರೋ ಅಲ್ಲಿ ದೇವತೆಗಳು ಸಂತೋಷಿಸುತ್ತಾರೆ ಇತ್ಯಾದಿ ಮಾತುಗಳು 'ಧರ್ಮಶಾಸ್ತ್ರ'ವಾಗಿ ಬಂದವು. ಇವುಗಳು ಅಧಿಕಾರವಾಣಿಯಿಂದ ಹೇಳಿದ್ದನ್ನು ಅಕ್ಷರಶಃ ಪಾಲಿಸಲಾಯಿತು. ಗಂಡನಿಂದಲೇ ಹೆಣ್ಣಿಗೆ ಸುಖಸಂತೋಷ, ಅವನಿಂದಲೇ ಅವಳ ಲೋಕ ಬೆಳಕಾಗಿರುವುದು ಎಂಬುದನ್ನು ಎಷ್ಟು ಸಾಧ್ಯತೆಗಳಲ್ಲಿ ಸ್ಥಾಪಿಸಬಹುದೋ ಅಷ್ಟೂ ಯತ್ನಗಳನ್ನೂ ನಡೆಸಲಾಗಿದೆ. 'ದೀರ್ಘಸುಮಂಗಲೀ ಭವ' ಎನ್ನುವ ಆಶೀರ್ವಚನವನ್ನೇ ತೆಗೆದುಕೊಳ್ಳಿ. ಈ ಹರಕೆ ಹೆಣ್ಣಿಗೆ. ಆದರೆ ಅದರ ಪರೋಕ್ಷ ಉದ್ದೇಶ ಗಂಡನಿಗೆ ಆಯುಸ್ಸು ಹೆಚ್ಚಲಿ ಎನ್ನುವುದು. ಹೆಣ್ಣು ಹೆಚ್ಚುದಿನ ಸಂತೋಷದಿಂದಿರಬೇಕಾದರೆ ಅವಳ ಗಂಡ ಹೆಚ್ಚುದಿನ ಬದುಕಬೇಕು-ಇದು ಇಲ್ಲಿನ ಉದ್ದೇಶಿತಾರ್ಥ. ಹೆಣ್ಣಿಗೆ ಮದುವೆಯಲ್ಲಿ ತಾಳಿ ಕಟ್ಟುವುದು ಕೂಡ ಅವಳನ್ನು ತನ್ನ ಆಸ್ತಿ ಎಂದು ಗುರುತಿಸಿ ಪ್ರಭುತ್ವ ಸ್ಥಾಪಿಸುವುದಕ್ಕಾಗಿ ಗಂಡಸು ಇತ್ತೀಚೆಗೆ ರೂಪಿಸಿಕೊಂಡ ಸಂಕೇತ. ಹಣ, ವಿದ್ಯೆ, ಯುದ್ಧದ ಗೆಲುವು-ಗಂಡಸು ಸಂಪಾದಿಸಿ ಶೇಖರಿಸಿಕೊಳ್ಳಬೇಕಾದ ಇಂಥವಕ್ಕೆಲ್ಲ ಹೆಣ್ಣನ್ನೇ ಅಧಿದೇವತೆಯನ್ನಾಗಿ ಮಾಡಲಾಗಿದೆ. ಹೆಣ್ಣಿನಂತೆ ಇವುಗಳೂ ಕೂಡ ಗಂಡಿಗೆ 'ಒಲಿಯಬೇಕಾದ' ಆಸ್ತಿಗಳು ಎಂಬ ಕಲ್ಪನೆಯಿಂದೆ.

ಕುಟುಂಬದ, ಸಮಾಜದ ಉಸಿರಾಟಕ್ಕೆ ಮೂಲವಾದ ಆರ್ಥಿಕ ಉತ್ಪಾದನೆಯಿಂದ ಹೆಣ್ಣು ದೂರಳಾದ ಮೇಲೆ ಅವಳ ಬಗ್ಗೆ ಅನವಶ್ಯಕ ಆಸಕ್ತಿಗಳು ಹುಟ್ಟಿಕೊಂಡವು. ಅವಳನ್ನು ಕೇವಲ ಬಾಹ್ಯಸೌಂದರ್ಯದಿಂದ ಗುರುತಿಸುವುದು ಆರಂಭವಾಯಿತು. ಸಂಗೀತ, ನೃತ್ಯ ಇತ್ಯಾದಿಗಳೆಲ್ಲ ಹೆಣ್ಣಿನ ಕುಶಲ ಕಲೆಗಳಾದವು. ವಸ್ತ್ರಾಭರಣಗಳು, ಲಲಿತಕಲೆಗಳು ಇವೆಲ್ಲವೂ ಹೆಣ್ಣಿನ ಆಲೋಚನೆಯ ದಾರಿ ತಪ್ಪಿಸಿದವು. ರಾಜ್ಯ ಆಳಿದ ಕೆಲವರನ್ನು ಬಿಟ್ಟರೆ ಮಿಕ್ಕ ಹೆಂಗಸರೆಲ್ಲ ಇಷ್ಟರಲ್ಲೇ ಮುಳುಗಿರುವಂಥ ಪರಿಸರವನ್ನು ಸಮಾಜ ಯಶಸ್ವಿಯಾಗಿ ರೂಪಿಸಿತು.

ಚರಿತ್ರೆಯಲ್ಲಿ ಸ್ತ್ರೀಯರು ರಾಜ್ಯಭಾರಮಾಡಿರುವ ಅನೇಕ ಉದಾಹರಣೆಗಳು ಸಿಗುತ್ತವೆ. ಆದರೆ ಈ ಅವಕಾಶಗಳನ್ನು ಕೊಟ್ಟಿರುವುದು ವರ್ಣವ್ಯವಸ್ಥೆಯ ಮೇಲ್ತುದಿಯಲ್ಲಿರುವ ಬ್ರಾಹ್ಮಣನಲ್ಲ ಎಂಬುದನ್ನು ಗಮನಿಸಬೇಕು. ಒಂದೋ ಎರಡೋ ಅಪವಾದಗಳನ್ನು ಬಿಟ್ಟರೆ ಎಲ್ಲ ಸ್ತ್ರೀ ಆಡಳಿತಗಾರರೂ ಕೆಳವರ್ಣಕ್ಕೆ ಸೇರುತ್ತಾರೆ. ಕೈಲಿದ್ದ ಅಧಿಕಾರ ಮತ್ತು ಸಂಪತ್ತು ಅವರಿಗೆ ಸಾಮಾಜಿಕ ಭದ್ರತೆ ಮತ್ತು ಗೌರವಗಳನ್ನು ತಂದುಕೊಟ್ಟಿದೆ. ಹೀಗಾಗಿ ಅರಮನೆಯ ಸ್ತ್ರೀವರ್ಗ ಹೆಚ್ಚು ಸ್ವಚ್ಛಂದತೆಯನ್ನುಳಿಸಿಕೊಂಡದ್ದು ಉಂಟು. ತನ್ನ ಗಂಡನನ್ನು ತಾನೇ ಆಯ್ಕೆಮಾಡುವ ಅವಕಾಶ ಅರಮನೆಯ ಹೆಣ್ಣುಗಳಿಗೆ ಮಾತ್ರ ಇತ್ತು. ಆದರೆ ಈ ಸ್ವಯಂವರ ಸಮಾರಂಭಕ್ಕೆ ಬರುತ್ತಿದ್ದವರೆಲ್ಲ ಹೆಣ್ಣಿನ ತಂದೆಯ ರಾಜಕೀಯ ವಲಯಕ್ಕೆ ಸೇರಿದವರೇ! ಸಾಹಸದ ಪರೀಕ್ಷೆಗಳನ್ನು, ಬೌದ್ಧಿಕ ಸಮಸ್ಯೆಗಳನ್ನು ಕೊಟ್ಟು ಅವುಗಳಲ್ಲಿ ಗೆದ್ದವನನ್ನು ವರಿಸುವ ರಾಜಕುಮಾರಿಯರ ಕಥೆಗಳು ಹೇರಳವಾಗಿವೆ. ಇವೂ ಕೂಡ ಹೆಣ್ಣು ಆಸ್ತಿ, ಅವಳನ್ನು ಗೆದ್ದು ಸಂಪಾದಿಸಬೇಕು ಎಂಬ ಆಲೋಚನೆಯನ್ನೆ ಪ್ರತಿನಿಧಿಸುತ್ತವೆ. ಇಷ್ಟು ಬಿಟ್ಟರೆ, ರಾಜಕೀಯದಲ್ಲಿ ಹೆಣ್ಣು ಕಾಣಿಸಿಕೊಳ್ಳುವುದು ಯುದ್ಧಕ್ಕೆ ಕಾರಣಳಾಗಿ ಅಥವಾ ಶತ್ರುರಾಜರ ನಡುವೆ ಮೈತ್ರಿ ಸಾಧಿಸಲು ಮದುವೆಮಾಡಿಕೊಟ್ಟಾಗ ಅಥವಾ ತಾಜಮಹಲಿನಂಥ ಶ್ರೀಮಂತಿಕೆಯ ಅಟ್ಟಹಾಸಗಳ ನಿರ್ಮಾಣಕ್ಕೆ ನೆಪವಾಗಿ, ಅಷ್ಟೆ.

ಸತಿ ಮುಂತಾದ ಸಾಮಾಜಿಕ ದುಷ್ಟತೆಗಳ ವಿರುದ್ಧ ಪ್ರತಿಭಟನೆಗಳು ಇತ್ತೀಚಿನ ಚರಿತ್ರೆಯಲ್ಲಿ ಕಂಡುಬರುತ್ತವೆ. ಬಾಲ್ಯವಿವಾಹ, ಸಹಗಮನಗಳನ್ನು ವಿರೋಧಿಸಿ ರಾಜಾರಾಮ ಮೋಹನರಾಯ್ ಮುಂತಾದ ಸಮಾಜಸುಧಾರಕರು ಹೋರಾಡಿದ್ದಾರೆ. ಆದರೆ ಇವುಗಳ ಅಸ್ತಿತ್ವದ ಮೂಲ ಕಾರಣಗಳನ್ನೆಲ್ಲ ಅವರೆಲ್ಲರೂ ಮರೆತಿದ್ದರು. ಇದನ್ನು ಕೇವಲ ಸಾಮಾಜಿಕ ಸುಧಾರಣೆ ಎಂದಷ್ಟೆ ಪರಿಗಣಿಸಿದ್ದರು. ಆದ್ದರಿಂದ ಈ ಸಮಾಜ ಸುಧಾರಣೆ ಹಿಂದಿನ ಪರಂಪರೆಯ ಕೆಲವು ಪದ್ಧತಿಗಳಿಗೆ ಆದರ್ಶವಾದಿಗಳು ನಡೆಸಿದ ಪ್ರತಿಭಟನೆಯಾಗಷ್ಟೆ ಉಳಿದು ದಾರಿತಪ್ಪಿತು.

ಆರ್. ಪೂರ್ಣಿಮಾ

ವರ್ಗಸಮಾಜ ರೂಪುಗೊಳ್ಳುತ್ತಿರುವ ಸಮಯದಲ್ಲೇ ಭಾರತದಲ್ಲಿ ವರ್ಣವ್ಯವಸ್ಥೆಯೂ ಬಾಹ್ಯಲಕ್ಷಣಗಳಲ್ಲಿ ಭಿನ್ನವಾದರೂ ಅವುಗಳ ಒಟ್ಟು ಉದ್ದೇಶ ಒಂದೇ ಆಗಿದೆ ವರ್ಗಗಳ ಆರ್ಥಿಕ ಸ್ಥಿತಿಗತಿಗಳು ಶೋಷಣೆಯ ದಿಕ್ಕನ್ನು ಬದಲಾಯಿಸಿವೆ. ಆರ್ಥಿಕವಾಗಿ ಮೇಲ್ತುದಿಯಲ್ಲಿರುವ ವರ್ಗದಲ್ಲಿ ಸ್ತ್ರೀಯರ ಉತ್ಪಾದನಾ ಶಕ್ತಿ, ಕ್ರಿಯಾ ಶಕ್ತಿಗಳು ಬೆಳಕಿಗೆ ಬರುವ ಅಗತ್ಯವೇ ಇರುವುದಿಲ್ಲ. ಮಧ್ಯಮ ವರ್ಗದ ಜನಕ್ಕೆ ಸಾಮಾಜಿಕ ಕಟ್ಟುಪಾಡುಗಳನ್ನು ಪಾಲಿಸುವ ಮನಸ್ಸಿದ್ದರೂ ಹಣದ ಅಗತ್ಯ ಸ್ತ್ರೀಯರನ್ನು ಉದ್ಯೋಗಕ್ಕೆ ಕಳಿಸುವಂತೆ ಪ್ರೇರೇಪಿಸುತ್ತದೆ. ಕೆಳವರ್ಗದ ಹೆಣ್ಣಿಗೆ ಮಾತ್ರ ಇಂಥ ಆಯ್ಕೆ ಅವಕಾಶಗಳಿರುವುದೇ ಇಲ್ಲ. ಕುಟುಂಬದಲ್ಲಿ ಗಂಡಿಗೆ ಸಮನಾಗಿ ಅವಳೂ ದುಡಿಯಲೇಬೇಕಾಗಿದ್ದರಿಂದ ಸಾಮಾಜಿಕ ನಿರ್ಬಂಧಗಳನ್ನು ಅವಳು ಗಮನಿಸುವುದಿಲ್ಲ. ಇದರಿಂದ ಕುಟುಂಬದಲ್ಲೂ ಅವಳು ಮಿಕ್ಕವರ್ಗದ ಹೆಂಗಸರಿಗಿಂತ ಹೆಚ್ಚು ಪ್ರಾಧಾನ್ಯ ಪಡೆದಿರುತ್ತಾಳೆ. ಕುಟುಂಬದ ಸಮಸ್ಯೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳುತ್ತಾಳೆ.

ಕೆಳವರ್ಣದಲ್ಲೇ ಆರ್ಥಿಕವಾಗಿ ಮೇಲ್ತುದಿಯಲ್ಲಿರುವ ಹೆಣ್ಣು ಸಾಮಾಜಿಕ ಭದ್ರತೆಯಿಂದಾಗಿ ಒಂದು ರೀತಿಯ ಸ್ವಾತಂತ್ರ್ಯವನ್ನು ಅನುಭವಿಸಿದರೆ, ಅದೇ ವರ್ಣದ ಆರ್ಥಿಕವಾಗಿ ಕೀಳುಮಟ್ಟದ ಹೆಣ್ಣು ತನ್ನ ಉತ್ಪಾದನಾಶಕ್ತಿಯ ಬಳಕೆಯಿಂದ ಸ್ವತಂತ್ರಳಾಗಿರುತ್ತಾಳೆ. ಆದರೆ ಆರ್ಥಿಕವಾಗಿ ಮೇಲಿರಲಿ, ಕೆಳಗಿರಲಿ ವರ್ಣವ್ಯವಸ್ಥೆಯಲ್ಲಿ ಮೇಲಿರುವ ಬ್ರಾಹ್ಮಣವರ್ಗ ಎಂದೂ ಹೆಣ್ಣನ್ನು ಅವಳ ಕ್ರಿಯಾಶೀಲತೆಯಿಂದ ಗುರುತಿಸಲಿಲ್ಲ. ಈ ವರ್ಗ ಹೆಣ್ಣಿನ ಬಗ್ಗೆ ಸದಾ ಸಂದೇಹವಿಟ್ಟದ್ದೇ ಅಲ್ಲದೆ, ಅದನ್ನು ತಾತ್ವಿಕವಾಗಿ ಸ್ಥಿರೀಕರಿಸಲು ಅಗತ್ಯವಾದ ಶಾಸ್ತ್ರ ನಿರ್ಮಾಣವನ್ನೂ ಮಾಡಿತು. ಆದರೆ ನಾಲ್ಕೂ ವರ್ಣಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಬೌದ್ಧಿಕವಾಗಿ ಹೆಚ್ಚಾಗಿ ಮೂಲೆಗುಂಪಾದದ್ದು ಮಧ್ಯಮವರ್ಗದ ಹೆಣ್ಣು. ಎಲ್ಲದರಿಂದ ವಂಚಿತಳಾಗಿ ಈ ವರ್ಗದ ಹೆಣ್ಣು ಹೆಚ್ಚಾಗಿ ಮನೆಯ ದೇವರುಗಳನ್ನು ಮೂಢನಂಬಿಕೆಗಳನ್ನು ಆರಾಧಿಸುತ್ತಾ ಜಡಳಾದಳು. ಈಗಲೂ ಜಾತಿ, ದೇವರುಗಳಲ್ಲಿ ಹೆಚ್ಚು ಭಯ, ನೈಜಶ್ರದ್ಧೆ ಕಾಣಬರುವುದು ಮಧ್ಯಮ ವರ್ಗದಲ್ಲಿ, ಅದೂ ಬ್ರಾಹ್ಮಣ ಜಾತಿಯಲ್ಲಿ. ಮೇಲ್ವರ್ಗದವರಿಗೆ ಇವುಗಳೆಲ್ಲ ದೈನಂದಿನ ಆಡಂಬರವಾದರೆ ಕೆಳವರ್ಗದವರಿಗೆ ಅವು ಅನಗತ್ಯವೂ ಅಪ್ರಮುಖವೂ ಹೆಚ್ಚೆಂದರೆ ಆಪತ್ತಿನಲ್ಲಿ ಮೊರೆಹೋಗಲು ಆಶ್ರಯವೂ ಆದವು.

ತೀರ ಹತ್ತಿರದ ಸಾಮಾಜಿಕ ಘಟಕವಾದ ಕುಟುಂಬದಲ್ಲಿನ ಅನ್ಯಾಯಗಳನ್ನು ಪ್ರತಿಕ್ರಿಯೆಗಳಿಲ್ಲದೆ ಒಪ್ಪಿಕೊಂಡು ವೈಭವಿಸಿದ ಸಾಹಿತ್ಯದಲ್ಲಿ ವ್ಯವಸ್ಥೆಯ ಬಗ್ಗೆ ಪ್ರತಿಭಟನೆಯನ್ನು ಕಾಣುವುದು ದುಸ್ತರವೇ. ಸಾಹಿತ್ಯದ ಶ್ರೇಷ್ಠತೆಯನ್ನು ಅದು ಹೊತ್ತಿರುವ ಸಾಮಾಜಿಕ ಹೊಣೆಗಾರಿಕೆಯಿಂದ ನಿರ್ಧರಿಸ ಹೊರಟರೆ ಈ ಎಲ್ಲ ಸಾಹಿತ್ಯಗಳ ಹಣೆಬರಹವೂ ಒಂದೇ ಆಗುತ್ತದೆ. ಸಮಾಜದ ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಹೆಣ್ಣಿನ ಸ್ಥಾನಮಾನಗಳಲ್ಲಾದ ಬದಲಾವಣೆಗಳು, ಅದಕ್ಕಿದ್ದ ಆರ್ಥಿಕ ಸಾಮಾಜಿಕ ಕಾರಣಗಳು ಇವುಗಳನ್ನು ಮುಕ್ತ ದೃಷ್ಟಿಯಿಂದ ಪರಿಶೀಲಿಸದಿದ್ದಲ್ಲಿ ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು ಸಾಹಿತಿಗಳು ಮುಂತಾದವರಿಂದ ಕೆಲವು ಭ್ರಮಾತ್ಮಕ ಹೇಳಿಕೆಗಳು ಹೊರಬರುತ್ತವೆ. ಹೆಣ್ಣು ಎಂದ ತಕ್ಷಣ ಸೀತೆ, ಸಾವಿತ್ರಿ, ಅನಸೂಯೆಯವರನ್ನು ಜಪಿಸುವ ಮೂರ್ಖತನ ಒಂದು ಕಡೆ ಕಂಡರೆ, ಕಾಮ ನಮ್ಮ ಜೀವಂತಿಕೆಯ ಪರಮ ನಿದರ್ಶನ, ಆರನೆಯವನನ್ನು ಬಯಸಿದ ಪಾಂಚಾಲಿ ನಮ್ಮ ಜೀವಂತಿಕೆಯ ದ್ಯೋತಕ ಇತ್ಯಾದಿ ಮಾತುಗಳು ಅದರ ಇನ್ನೊಂದು ಮುಖವಾಗುತ್ತದೆ.

ಮಹಾಭಾರತವನ್ನು ಶ್ರೇಷ್ಠ ಕಾವ್ಯವೆಂದೋ, ಎರಡು ಬಣಗಳ ನಡುವೆ ನಡೆದ ಜಗಳವೆಂದೋ, ಕೃಷ್ಣಲೀಲಾರಂಗವೆಂದೋ, ಭಾವಿಸುವುದಕ್ಕಿಂಥ, ಸಾಮಾಜಿಕ ಬದಲಾವಣೆಗಳು ಮೂರ್ತಗೊಳ್ಳುತ್ತಿದ್ದ ಒಂದು ಸಮಾಜದ ಸಂಕ್ರಮಣಾವಸ್ಥೆಯ ಒಂದು ಲಿಖಿತ ದಾಖಲೆಯನ್ನಾಗಿ ಗಣಿಸುವುದು ಮೇಲು. ಎಲ್ಲ ರೀತಿಯ ಸಾಮಾಜಿಕ ಬಾಂಧವ್ಯಗಳಿಗೂ ಅದರಲ್ಲಿ ಉದಾಹರಣೆಗಳಿವೆ; ಪರಸ್ಪರ ವಿರೋಧಗಳಿವೆ. ಇವೆಲ್ಲ ಬದಲಾಗುತ್ತಿರುವ ಸಮಾಜದಲ್ಲಿದ್ದ ಮಿಶ್ರತೆಯ ಪ್ರತೀಕಗಳಾಗುತ್ತವೆ. ಶಂತನುವಿಗೆ ಯೋಜನಗಂಧಿಯನ್ನು ಕೈಹಿಡಿಯಲು ಅಡ್ಡಬಾರದ 'ಕುಲ' ಕರ್ಣನನ್ನು ಆವರಿಸುವಾಗ ಬರುತ್ತದೆ. ಕುಂತಿಗೆ ಮದುವೆಗೆ ಮೊದಲೇ ಮಗುವಾಗಿದ್ದರೂ ಸಮಾಜದಲ್ಲಿ ಗೌರವವಿರುತ್ತದೆ. ಪಾಂಡುವಿನ ಮರಣಾನಂತರ ಮಾದ್ರಿ 'ಸಹಗಮನ' ಮಾಡಿದರೆ, ಕುಂತಿ 'ವಿಧವೆ'ಯಾಗಿ ಉಳಿಯುತ್ತಾಳೆ. ಅಷ್ಟೇ ಅಲ್ಲ, ತನ್ನ ಮಕ್ಕಳ ಏಳಿಗೆಗಾಗಿ ಸದಾ ಪರಿತಪಿಸುತ್ತ ಅವರ ರಾಜಕಾರಣದಲ್ಲೂ ಭಾಗವಹಿಸುತ್ತಾಳೆ. ಎಲ್ಲರಿಂದ ಆದರ, ಮಾನ್ಯತೆಯನ್ನು ಪಡೆಯುತ್ತಾಳೆ. 'ಬಹುಪತಿತ್ವ' ದ್ರೌಪದಿಗೆ ಇದ್ದರೆ, ಪಾಂಡು, ಭೀಮ, ಅರ್ಜುನರಿಗೆ 'ಬಹುಪತ್ನಿತ್ವ' ಇದೆ. ಆದರೆ ಭೀಷ್ಮನೋ ಕಟ್ಟಾ ಬ್ರಹ್ಮಚಾರಿ. ಸವತಿಮಾತ್ಸರ್ಯದ ಸೋಂಕೇ ಇಲ್ಲದಿದ್ದರೂ ಓರಗಿತ್ತಿಯರ ನಡುವೆ ಮಾತ್ಸರ್ಯ ಇದ್ದು ಅದು ಅವರ ಮಕ್ಕಳಿಗೂ ಸಾಗುತ್ತದೆ. ಸ್ವಯಂವರ, ಕನ್ಯಾಪಹರಣ, ನಿಯೋಗ-ಎಲ್ಲ ವಿವಾಹಪದ್ಧತಿಗಳಿಗೂ ನಿದರ್ಶನಗಳಿವೆ. ಇವೆಲ್ಲಕ್ಕಿಂಥ ವಿಶಿಷ್ಟವಾದದ್ದು ಕೃಷ್ಣ-ದ್ರೌಪದಿಯರ ಸಂಬಂಧ. ಗಂಡು ಹೆಣ್ಣಿನ ಬೌದ್ಧಿಕ ಕೊಳುಕೊಡುಗೆಯನ್ನು ಇದು ಪ್ರತಿನಿಧಿಸುತ್ತದೆ. ಸಂಬಂಧಗಳಿಗೆ, ಪರಂಪರೆಗೆ, ಆದರ್ಶಕ್ಕೆ ಎಲ್ಲವೂ ವಿಧೇಯವಾಗಿವೆ. ರಾಮಾಯಣದಲ್ಲಂತೂ ಇಂಥ ವಿಧೇಯತೆಗಳು ಹೇರಳವಾಗಿವೆ. ನಮ್ಮ ಮುಕ್ಕಾಲುಭಾಗ ಸಾಹಿತ್ಯವೆಲ್ಲ ಇಂಥ ಒಂದಿಲ್ಲೊಂದು ವಿಧೇಯತೆಗಳ ಕಗ್ಗವಾಗಿದೆ.

ಹೆಣ್ಣನ್ನು ತನ್ನ ಆಶಯಗಳಿಗನುಗುಣವಾಗಿ ಮಾರ್ಪಡಿಸುತ್ತ ಅವಳು ತನ್ನ ಆಸ್ತಿಯ ಒಂದು ಭಾಗ ಎಂದು ಗಂಡು ಲೆಕ್ಕ ಹಾಕಲು ಆರಂಭಿಸಿದ್ದನು. ಈ ನಡೆದಾಡುವ ಆಸ್ತಿಯ ಕಲ್ಪನೆ ಸಾಹಿತ್ಯದಲ್ಲಿ ಕೂಡ ಸ್ಪಷ್ಟವಾಗಿದೆ. ಪಾಡವರು ಜೂಜಿನಲ್ಲಿ ರಾಜ್ಯ, ಕೋಶ ಮುಂತಾದ ಆಸ್ತಿಗಳ ಜತೆ ದ್ರೌಪದಿಯನ್ನೂ ಪಣವಾಗಿಟ್ಟರು. ಹೆಂಡತಿಯನ್ನು ಮಾರಿದ ಹರಿಶ್ಚಂದ್ರನನ್ನು ಅದರ ಸಾಮಾಜಿಕ ಹಿನ್ನೆಲೆಯ ಬಗ್ಗೆ ಆಲೋಚಿಸದೆ, ಸತ್ಯದ ಆದರ್ಶಕ್ಕಾಗಿ ಎಲ್ಲ ಕವಿಗಳೂ ಹೊಗಳುತ್ತಾರೆ. ಇದಕ್ಕೆ ಇನ್ನೂ ಉದಾಹರಣೆಗಳನ್ನು ಕೊಡಬಹುದು-ಶರಣ ಮಾದರಸನ ಶಿವಪೂಜೆಗಾಗಿ ಹೊನ್ನು ಒದಗಿಸಲು ತನ್ನ ಮಗಳನ್ನೇ ಒತ್ತೆಯಿಟ್ಟ ಬಡಭಕ್ತನ ಕಥೆ 15ನೇ ಶತಮಾನದ ಕೃತಿಯಾದ 'ಪದ್ಮರಾಜ ಪುರಾಣದಲ್ಲಿ ಬರುತ್ತದೆ.

(ಮುಂದುವರೆಯುವುದು)

ಮಹಿಳಾ ಚಳುವಳಿ ಯಥಾದೃಷ್ಟಿ

(ಹಿಂದಿನ ಸಂಚಿಕೆಯಿಂದ)

ಬೂರ್ಜ್ವಾ ವಿವಾಹವು ವಾಸ್ತವಿಕವಾಗಿ, ಸಾಮಾನ್ಯ ಪತ್ನಿಯರ ಒಂದು ಪದ್ಧತಿ ಮತ್ತು ಕಮ್ಯುನಿಸ್ಟರು ಎಂಥ ಸಾಧ್ಯತೆ ಬಗ್ಗೆ ಹೇಳಿರಬಹುದೆಂದರೆ, ಗೋಪ್ಯಮುಖ ವ್ಯಾಪ್ತಿದಂತೆ ಮುಚ್ಚಿರುವುದಕ್ಕೆ ಬದಲಾಗಿ ಕಾನೂನು ಬದ್ಧವಾದ, ಮುಕ್ತವಾದ ಮಹಿಳೆಯರ ಸಮುದಾಯ ಆರಂಭಿಸುವುದೇ ಅವರ ಆಸಕ್ತಿ. ಉಳಿದ ವಿಷಯದ ಬಗ್ಗೆ ಹೇಳುವುದಾದರೆ, ಉತ್ಪಾದನೆಯ ಪ್ರಸಕ್ತ ಪದ್ಧತಿಯನ್ನು ತೊಡೆದುಹಾಕುವುದರೊಂದಿಗೆ ಸಾರ್ವಜನಿಕ ಅಥವಾ ಖಾಸಗಿಯಾಗಿ ವೇಶ್ಯಾ ಜೀವನ ಪದ್ಧತಿಯ ಮಹಿಳಾ ಸಮುದಾಯವನ್ನೂ ತೊಡೆದುಹಾಕುವುದೆಂದು ಬೇರೆ ಹೇಳಬೇಕಾಗಿಲ್ಲ(ಮ್ಯಾನಿಫೆಸ್ಟೋ). [Bourgevis marriage is in reality a system of wives in common and thus, at the most, what the communists might possibly be reproached with, is that they desire to introduce, in substitution for a hypovitically concealed, an openely legalized community of women. For therest, it is self-evident that the abolition of the present system of production must bring with it the abolition of the community of women springing from that system i. e to prostitution both public and private]

ಸಮಾನತೆಯ ಅಡ್ಡಿಯ ನಿವಾರಣೆ

ಇಂಥ ಸಮಾಜದತ್ತ ಮಹಿಳೆಯರೂ ಪುರುಷರೂ 'ಆಧುನೀಕರಣದ' ವಿಧಾನದಲ್ಲಿದ್ದಾರೆ. ಹಳೇ ಬಂಧನ ಹೋಗಿ ಹೊಸ ಸಂಕೋಲೆ ಬರುತ್ತಿರುವ ಬಗ್ಗೆ ಈಗಾಗಲೇ ಗಮನಿಸಿದ್ದೇವೆ. ಹಿಂದೂ ಸಮಾಜದ ಹಳೇ ಪದ್ಧತಿಗಳು ಪೂರ್ಣವಾಗಿ ತೊಡೆದಿಲ್ಲ. ಅದರ ಮೇಲೆ ಹೊಸ ನಿರ್ಬಂಧ ಮತ್ತು ಹೊಸ ಹೊರೆಯನ್ನು ಹಾಕಲಾಗಿದೆ. ಇದು ಪುರುಷರಿಗೂ ಹೌದು. ಸಮಾಜ ಸುಧಾರಣೆಯತ್ತ ಹೋರಾಡುತ್ತಿರುವ ಸಂಸ್ಥೆಗಳು, ಮುಖ್ಯವಾಗಿ ಮಹಿಳಾ ಸಂಘಟನೆಗಳು ಹಳೆ ಮತ್ತು ಹೊಸ ದಾಸ್ಯಗಳ ಬಗೆಗೆ ಒಟ್ಟಿಗೇ, ಹೋರಾಟ ನಡೆಸಬೇಕಾಗಿದೆ.

ಈ ಹೋರಾಟ ನಡೆಸುವಾಗ ಅವರು ಪುರುಷ ಪ್ರಧಾನ ಸಮಾಜವನ್ನು ವಿವಿಧ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಶಕ್ತಿಗಳು ಹಾಕಿರುವ ಕಂಟಕಗಳನ್ನು ಎದುರಿಸಬೇಕು. ಇದನ್ನು ಹೆಚ್ಚು ವಿವರಿಸಬೇಕಾಗಿಲ್ಲ. ಮಹಿಳಾ ವಿಮೋಚನೆಯತ್ತ ಒಲವಿರುವವರೂ ತಮ್ಮ ಸುಪ್ತ ಪ್ರಜ್ಞೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಿಂದಿರುತ್ತಾರೆಂಬುವುದನ್ನು ಗಮನಿಸಿದರೆ ಸಾಕು. ಆದುದರಿಂದ ಮಹಿಳಾ ವಿಮೋಚನಾ ಹೋರಾಟದಲ್ಲಿ ಸಮರ್ಪಣೆ ಮನೋಭಾವ ಹೊಂದಿರುವ ವ್ಯಕ್ತಿಗಳೂ ಸಂಸ್ಥೆಗಳೂ ಮಹಿಳೆಯರ ಮೇಲೆ ಸ್ವಲ್ಪ ಪುರುಷ ಅಧಿಕಾರವನ್ನು ತಡೆಯುವ ಸಮರ ಹೂಡಬೇಕು.

ಕಾರ್ಮಿಕ ಮತ್ತು ಮಧ್ಯಮ ವರ್ಗದ ನೌಕರರಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನ ಕೆಲಸಕ್ಕೆ ಸಮಾನ ವೇತನವೆಂದರೆ ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಏರಿಸುವದಷ್ಟೇ ಅಲ್ಲ, ಕುಟುಂಬದ ಜಂಟೀ ಆದಾಯಕ್ಕೂ ನೆರವಾಗುತ್ತದೆ. ಆದರೆ ಇದು ಕೆಲಸದ ಗ್ಯಾರಂಟಿಯ ಮೇಲೆ ಅವಲಂಬಿತವಾಗಿರುತ್ತದೆ. ಸಮಾನ ವೇತನ ನೀಡಬೇಕೆಂಬ ಕಾರಣದಿಂದ ಅವರನ್ನು ಕೆಲಸದಿಂದ ತೆಗೆದುಹಾಕಿರುವ ಘಟನೆಗಳಿಲ್ಲದಿಲ್ಲ. ಮಹಿಳೆಯರಿಗೆ ಉದ್ಯೋಗ, ಸಮಾನ ವೇತನ, ವೇತನ ಮಟ್ಟದಲ್ಲಿ ಏರಿಕೆ ಮತ್ತು ಕಾರ್ಯದ ಸ್ಥಿತಿಗತಿಗಳು-ಇವು ಸಾಮಾನ್ಯ ಬೇಡಿಕೆಗಳಾಗುತ್ತವೆ. ಉದ್ಯೋಗಸ್ಥ ಮಹಿಳೆಯ ಸ್ಥಿತಿಯಲ್ಲಿನ ಸುಧಾರಣೆಯು 'ಅನ್ನತರುವ' ಪುರುಷನ ಆರ್ಥಿಕ ಹೊರೆಯನ್ನೂ ಕಡಿಮೆ ಮಾಡುತ್ತದೆಯಷ್ಟೇ ಅಲ್ಲ, ಸುಖೀ ಕುಟುಂಬ ಜೀವನಕ್ಕೆಡೆ ಮಾಡುತ್ತದೆ. ಆದುದರಿಂದ ಪುರುಷರೊಂದಿಗಿನ ಸಮಾನತೆಗಾಗಿ ಮಹಿಳೆಯರು ಹೋರಾಡುವಾಗ ಇಡೀ ಶ್ರಮಿಕ ವರ್ಗವೂ ಪಾಲ್ಗೊಳ್ಳಬೇಕು.

ಯಥಾದೃಷ್ಟಿ

ಶ್ರಮಿಕರ ಸಾಮಾನ್ಯ ಸಂಘಟನೆಗಳನ್ನು ಶಕ್ತಿಯುತಗೊಳಿಸಿದರೆ ಮಾತ್ರ ಅವರ ಸಮಾನತೆಯ ಹೋರಾಟ ಸಫಲಗೊಳ್ಳುವುದೆಂಬ ಅಂಶವನ್ನೂ ಮಹಿಳಾಸಂಘಟನೆಗಳು ಅರಿಯಬೇಕು ಜಾತಿ, ಕೋಮು ಮತ್ತು ಬುಡಕಟ್ಟು ವ್ಯವಸ್ಥೆಗಳ ಬಂಡವಾಳಶಾಹಿ ಪೂರ್ವ; ಭೂಮಾಲೀಕರು ಮತ್ತು ಸಾಮ್ರಾಜ್ಯಶಾಹಿಯೊಂದಿಗೆ ಜೊತೆಗೂಡಿದ ಸಣ್ಣ ಪ್ರಮಾಣದ ಏಕಸ್ವಾಮ್ಯ ಬಂಡವಾಳಶಾಹಿಗಳಿಂದ ಬೆಳೆಯುತ್ತಿರುವ ಬಂಡವಾಳಶಾಹಿ ಸಮಾಜ—ಈ ಎರಡು ವರ್ಗಗಳ ವಿರುದ್ಧ ಭಾರತದ ಜನರು ಹೋರಾಡುತ್ತಿದ್ದಾರೆ. ಈ ಹೋರಾಟದ ಯಶಸ್ಸಿನ ಶಿಖರವೇ ಜನತೆಯ ಪ್ರಜಾಸತ್ತಾತ್ಮಕ ರಾಜ್ಯ ರೂಪುಗೊಳ್ಳಲು ನಾಂದಿಯಾಗುತ್ತದೆ. ಮುಂದೆ ಅದೇ ಸಮಾಜವಾದಿ ಸಮಾಜಕ್ಕೆ ಬುನಾದಿ ಹಾಕುತ್ತದೆ, ಅಂತಿಮವಾಗಿ ಕಮ್ಯುನಿಸ್ಟ್ ತತ್ವದತ್ತ.

ಅಂಥ ಯಥಾದೃಷ್ಟಿ ಇರಿಸಿಕೊಂಡು ಪ್ರಜಾಸತ್ತಾತ್ಮಕ ಚಳವಳಿ, ಮುಖ್ಯವಾಗಿ ಮಹಿಳಾ ಚಳವಳಿ ಮುನ್ನಡೆಯಬೇಕು. ಜಾತಿ, ಕೋಮು ಮತ್ತು ಬುಡಕಟ್ಟು ವ್ಯವಸ್ಥಾಪನೆಗಳ ವಿರುದ್ಧ ಒಡಂಬಡಿಕೆ ಇಲ್ಲದ ಹೋರಾಟ; ಭೂಮಾಲೀಕರ ಪ್ರಭಲತೆ ವಿರುದ್ಧ ಗ್ರಾಮೀಣ ಜನರ ಹೋರಾಟದ ಪರಿಪೂರ್ಣತೆ; ಕ್ಷಿಪ್ರ ಕೈಗಾರಿಕರಣ ಹಾಗೂ ದೈಹಿಕ ಸಾಮರ್ಥ್ಯ (ಪುರುಷ-ಸ್ತ್ರೀ) ವಿರುವವರೆಲ್ಲರಿಗೂ ಉದ್ಯೋಗಾವಕಾಶ ನೀಡುವ ಆರ್ಥಿಕ ಸ್ಥಿತಿಯ ಆಧುನೀಕರಣ; ಪ್ರತಿಗಾಮಿ, ಅಂಧ ಅನುಕರಣೆಯಲ್ಲಿನ ನಂಬಿಕೆ ಮತ್ತು ಸಂಸ್ಥೆಗಳ ವಿರುದ್ಧ ಶಕ್ತಿಯುತ ಕ್ರಮ ಇವು ನಮ್ಮ ಮಹಿಳೆಯರ ವಿಮೋಚನೆಗೆ ಅಗತ್ಯವಾಗಿ ಬೇಕಾದವು.

ಪರಿಪೂರ್ಣ ಮಹಿಳಾ ವಿಮೋಚನೆಯ ಬಗ್ಗೆ ಟೀಕೆಗಳಿಲ್ಲದಿಲ್ಲ; ಇದರ ಬಗ್ಗೆ ಎಡ ಪಂಥೀಯ ಘೋಷಣೆಗಳ ಬಗೆಗೂ ಟೀಕೆಗಳುಂಟು. ಮಹಿಳೆಯರ ಸಮಾನತೆಯ ಯಾವುದೇ ಚಳವಳಿಯ ಗುರಿಯು ಕುಟುಂಬದ ವಿಸರ್ಜನೆ ಎಂಬ ಬಗ್ಗೆಯೂ ಸಲಹೆ ಮಾಡಲಾಗಿತ್ತು. ಲೈಂಗಿಕದಂಥ ಅವಶ್ಯಕತೆಗಳನ್ನು ವಿವಾಹ, ಕುಟುಂಬಗಳಲ್ಲಲ್ಲದೆ ಬೇರೆ ನೂರಾರು ರೀತಿಯಲ್ಲಿ ಪಡೆಯಬಹುದು; ಮಕ್ಕಳನ್ನು ತರುವ ರೀತಿಯನ್ನೂ, 'ಬೇಬಿ ಫಾರಮ್ಸ್' ಎಂಬ ಸಂಸ್ಥೆಗಳಿಂದ ನಡೆಸಿ ಮಾತೃತ್ವದ ಶ್ರಮದಿಂದ ಮಹಿಳೆಗೆ ಬಿಡುಗಡೆ ನೀಡಬಹುದೆಂದೂ ಸಲಹೆ ನೀಡಲಾಗಿತ್ತು. ಅದಕ್ಕಿಂತಾ ಒಂದು ಸ್ಪಷ್ಟ ಪ್ರಶ್ನೆ ಕೇಳಬಹುದು: ಹೆರಿಗೆ ಮತ್ತು ಮಕ್ಕಳ ಪಾಲನೆ ಬಗೆಗೆ ಹೊಸ ಹೊಸ ವೈಜ್ಞಾನಿಕ ವಿಧಾನಗಳನ್ನು ನೀಡಲು ವಿಜ್ಞಾನಕ್ಕೆ ಸಾಧ್ಯವಿಲ್ಲವೆ?

ಪ್ರಸಕ್ತ ವರ್ಗಸಮಾಜವು ಹೋಗಿ ನೂತನವಾಗಿ ವರ್ಗರಹಿತ ಸಮಾಜ ಬಂದಾಗ ಸ್ತ್ರೀಪುರುಷರ ನಡುವೆ ಎಂಥ ರೀತಿಯ ಸಂಬಂಧವಿರಬಹುದೆಂಬುದನ್ನು ಈಗ ಯಾರೂ (ಊಹಿಸಲಾರರು) ಭವಿಷ್ಯ ಕಾಣಲಾರರು. ಹೊಸ ಪೀಳಿಗೆ ಮೇಲೆದ್ದ ಮೇಲೆ ಅದನ್ನು ಅರಿಯಬಹುದು. ತಮ್ಮ ಜೀವನವಿಡೀ ಮಹಿಳೆಯರ ಶರಣಾಗತಿಯನ್ನೂ ಅಥವಾ ಇನ್ನಾವುದೇ ಸಾಮಾಜಿಕ ಶಕ್ತಿಯಿಂದ ಕೊಳ್ಳುವ ಅವಕಾಶಕಾಣದ ಪುರುಷರಿರುವ ಪೀಳಿಗೆ; ಮತ್ತು ಮಹಿಳೆಯರು-ನೈಜ ಪ್ರೀತಿಯಲ್ಲದೆ ಬೇರೆ ಯಾವುದೇ ಪರಿಗಣನೆಗೆ ಒಳಗಾಗಿ ಯಾವುದೇ ಪುರುಷನಿಗೆ ಶರಣಾಗದಿರುವುದು ಅಥವಾ ಆರ್ಥಿಕ ಪರಿಣಾಮಗಳಿಗಾಗಿ ಹೆದರಿ ತಮ್ಮ ಪ್ರಿಯರಿಗೆ ಅರ್ಪಿಸಿಕೊಳ್ಳದಿರುವುದು. (ಇಂಥ ಸ್ತ್ರೀ-ಪುರುಷರ ಪೀಳಿಗೆ ಇರುವ ಸಮಾಜ) (ಫೆಡ್ರಿಕ್ ಎಂಗಲ್ಸ್‌ರ ಆರಿಜಿನ್ ಆಫ್ ದಿ ಫ್ಯಾಮಿಲಿ, ಪ್ರೈವೇಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್, ಮಾರ್ಕ್ಸ್ ಅಂಡ್ ಎಂಗಲ್ಸ್-ಸೆಲೆಕ್ಟೆಡ್ ವರ್ಕ್ಸ್)

ಆದುದರಿಂದ ಭವಿಷ್ಯತ್ತಿನ ಭಾರತದಲ್ಲಿ ಸ್ತ್ರೀ-ಪುರುಷರ ಸಂಬಂಧದ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬೇಕಿಲ್ಲ. ಜನತೆಯ ಪ್ರಜಾಸತ್ತಾತ್ಮಕ ಹೋರಾಟದ ಮೂಲಕ ಈ ಪೀಳಿಗೆಯು ಅಂಥ ಸಮಾಜ ನಿರ್ಮಾಣಕ್ಕೆ ಹೆಜ್ಜೆ ಹಾಕಿದರೆ ಮುಂದಿನ ಪೀಳಿಗೆ ಅಂಥ ಸಮಾಜದಲ್ಲಿ ಬದುಕಬಹುದು. ಈ ದೃಷ್ಟಿಯಲ್ಲಿ ಮಹಿಳಾ ಚಳುವಳಿ ಕೂಡ ಹೆಜ್ಜೆ ಇರಿಸಬೇಕೆಂದು ಹೇಳಬೇಕಾಗಿಲ್ಲ.

[ಇ.ಎಂ.ಎಸ್. ನಂಬೂದಿರಿಪಾಡ್ ಅವರ Perspective of Women's Moment ಲೇಖನದ ಸಂಗ್ರಹಾನುವಾದ.]

ಮೂಲ: ಇ. ಎಂ. ಎಸ್.
ಅನು: ಎಲ್. ಗಾಯಿತ್ರಿದೇವಿ

○

ಕಾಂ. ಚುಡೋ ಇನ್ನಿಲ್ಲ

ಸ್ವಾತಂತ್ರ್ಯ ಹೋರಾಟ ನಡೆಯುತ್ತಿರುವಾಗಲೇ 1942-43ರಲ್ಲೇ ಕಾರವಾರ ಜಿಲ್ಲೆಯಲ್ಲಿ ಬಲಿಷ್ಟವಾದ ರೈತಸಂಘ ಕಟ್ಟಿ ಕೆಂಬಾವುಟವಡಿಯಲ್ಲಿ ಹಲವಾರು ರೈತ ಹೋರಾಟಗಳನ್ನು ನಡೆಸಿಕೊಂಡು ಬಂದ ಚುಡೋ ಫಕೀರ ಇನ್ನಿಲ್ಲ. 1947ರಲ್ಲಿ ರೈತ ಸಮ್ಮೇಳನ ನಡೆಯುತ್ತಿದ್ದಾಗ ಅದರ ಮೇಲೆ ಸರ್ಕಾರ ಪ್ರತಿಬಂಧ ಹೇರಿ ರೈತ ಮುಖಂಡರನ್ನೆಲ್ಲ ಬಂಧಿಸಿದಾಗ ಕಾಂ. ಚುಡೋ ಅವರು ಕಾರವಾರ ಜೈಲಿನಿಂದ ತಪ್ಪಿಸಿಕೊಂಡು ಹೋಗಿದ್ದರು. ಇವರು ಕಮ್ಯುನಿಸ್ಟ್ ಪಾರ್ಟಿ ಮುಖಂಡರಾಗಿಯೂ ದುಡಿದರು. ಕಳೆದ 15 ವರ್ಷಗಳಿಂದ ತಮ್ಮ ಆರೋಗ್ಯ ಮತ್ತು ಆರ್ಥಿಕ ಪರಿಸ್ಥಿತಿ ಅತಿ ಕೆಟ್ಟು ಹೋದ ಕಾರಣ ಅವರಿಗೆ ಪಾರ್ಟಿ ಮತ್ತು ರೈತ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗಲಿಲ್ಲ. ಅನಾರೋಗ್ಯದಿಂದಲೇ ಅವರು ತಮ್ಮ ಕೊನೆಯುಸಿರೆಳೆಯಬೇಕಾಯಿತು.

ಇಂಥ ಧೀರ ಹೋರಾಟಗಾರನ ಮರಣದಿಂದ ಬೆಳೆದು ಬರುತ್ತಿರುವ ರೈತ-ಕಾರ್ಮಿಕರ ಹೋರಾಟಕ್ಕೆ ಅಪಾರ ಹಾನಿಯಾಗಿದೆ. ಐಕ್ಯರಂಗ ನಮ್ಮನ್ನಗಲಿದ ಚುಡೋ ಫಕೀರರಿಗೆ ಶ್ರದ್ಧಾಂಜಲಿಯನ್ನರ್ಪಿಸುತ್ತದೆ. ●

ಕಾಫೀ ಕ್ಯೂರಿಂಗ್ ಕಾರ್ಮಿಕರ ಅನಿರ್ಧಿಷ್ಟ ಮುಷ್ಕರ

27-2-81 ರಿಂದ ಚಿಕ್ಕಮಂಗಳೂರಿನಲ್ಲಿರುವ ಮಲೆನಾಡು ಪ್ಲಾಂಟರ್ಸ್ ಕಾಫೀಕ್ಯೂರಿಂಗ್ ವರ್ಕ್ಸ್ ಮತ್ತು ಮೈಸೂರು ಕ್ಯೂರಿಂಗ್ ವರ್ಕ್ಸ್‌ಗಳ ಸುಮಾರು 600ಜನ ಮಹಿಳಾ ಕಾರ್ಮಿಕರು, ದಿನಗೂಲಿ ಕೆಲಸಗಾರರು ಮತ್ತು ಕಛೇರಿಯಲ್ಲಿ ಕೆಲಸ ಮಾಡುವ ಕೆಲಸಗಾರರೂ ಸೇರಿ ಸುಮಾರು 1000ಕ್ಕಿಂತ ಹೆಚ್ಚು ಕಾರ್ಮಿಕರು, ನೌಕರರು ಅನಿರ್ಧಿಷ್ಟ ಮುಷ್ಕರ ಪ್ರಾರಂಭಿಸಿರುತ್ತಾರೆ.

ಫೆಬ್ರವರಿ 24 ಮತ್ತುರಂದು ನಡೆದ ಕಾಫೀ ಕ್ಯೂರಿಂಗ್ ಆಡಳಿತ ಮಂಡಳಿ ಮತ್ತು ಕಾರ್ಮಿಕ ಪ್ರತಿನಿಧಿಗಳ ನಡುವೆ ನಡೆದು ಮಾತುಕತೆ ಮುರಿದು ಬಿದ್ದುದೇ ಮುಷ್ಕರಕ್ಕೆ ಕಾರಣ. ಬೆಲೆಸೂಚ್ಯಂಕದ ಪ್ರಕಾರ 6 ತಿಂಗಳಲ್ಲಿ 34 ಪಾಯಿಂಟ್‌ಗಳಷ್ಟು ಸೂಚ್ಯಂಕದಲ್ಲಿ ಏರಿಕೆಯಾಗಿದೆ. ಇದಕ್ಕೆ ಅನುಗುಣವಾಗಿ ಪ್ರತಿ ಪಾಯಿಂಟಿಗೆ ರೂ. 1-50 ಕೊಡಬೇಕೆಂದು ಕಾರ್ಮಿಕರ ಬೇಡಿಕೆಯಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ದಿನವೊಂದಕ್ಕೆ ಕೇವಲ 25 ಪೈಸೆ ಹೆಚ್ಚಳಕೊಡುವುದಾಗಿ ಆಡಳಿತ ಮಂಡಳಿಯ ನಿಲುವಾಗಿದೆ.

ಕಾಪೀ ಕ್ಯೂರಿಂಗ್ ಕಾರ್ಮಿಕರಿಗೆ, ಇತರ ಕಾರ್ಮಿಕ ವಿಭಾಗಗಳು ಎಲ್ಲ ರೀತಿಯ ಬೆಂಬಲ ಸಹಕಾರಕೊಡಬೇಕೆಂದು ಸಂಘದ ಪರವಾಗಿ ಎ. ಕೆ. ವಿಶ್ವನಾಥ ಮನವಿಮಾಡಿಕೊಂಡಿದ್ದಾರೆ.

●

ಡಿ. ವೈ. ಎಫ್. ಐ. ಸಮ್ಮೇಳನ

15-2-81ರಂದು ಕಾಸರಗೋಡು ತಾಲ್ಲೂಕಿನ ಮಂಜೇಶ್ವರ ಬ್ಲಾಕ್ ಡಿ.ವೈ.ಎಫ್ ಐ.ನ ಸಮ್ಮೇಳನ ಜರುಗಿತು. ಈ ಸಮ್ಮೇಳನವನ್ನು ಡಾ. ಪಿ.ಕೆ.ಆರ್. ವಾರಿಯರ್ ಉದ್ಘಾಟಿಸಿದರು. ಪ್ರತಿನಿಧಿಗಳನ್ನು ಉದ್ದೇಶಿಸಿ ಕಾಂ. ಭಾಸ್ಕರನ್ ಮಾಸ್ಟರ್, ಬಿ. ಮಾಧವ, ಪಿ. ರಾಘವನ ಮೊದಲಾದವರು ಮಾತನಾಡಿದರು.

ಅದೇ ದಿನ ಸಾಯಂಕಾಲ ಹೊಸಂಗಡಿ ಗೇಟಿನ ಬಳಿ ಸಾರ್ವಜನಿಕ ಸಭೆ ನಡೆಯಿತು. ಕಾಂ. ರಾಮಯ್ಯ, ಶೆಟ್ಟಿ, ಪಿ. ಕೆ. ಮಹಮ್ಮದ ಮತ್ತು ಬಾಲಚಂದ್ರಭಟ್ ಮೊದಲಾದವರು ಮಾತನಾಡಿದರು. ○

ಪ್ರಮುಖ ವಿಚಾರಗಳ ಬಗ್ಗೆ ಯೋಜನಾ ಆಯೋಗದ ಮೌನ

[ಫೆಬ್ರುವರಿ 13 ಮತ್ತು 14ರಂದು ನವದೆಹಲಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಪ. ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಮಾಡಿದ ಭಾಷಣದ ಸಂಗ್ರಹಾನುವಾದ].

1980-85ರ ರಾಜ್ಯ ಯೋಜನೆಗಳ ಬಗ್ಗೆ ರಾಜ್ಯಗಳ ಜೊತೆ "ವಿಸ್ತೃತ ಚರ್ಚೆ"ಗಳನ್ನು ನಡೆಸಲಾಯಿತೆಂದು ಯೋಜನಾ ಆಯೋಗದ ಉಪಾಧ್ಯಕ್ಷರು ಕರಡಿನ ಮುನ್ನುಡಿಯಲ್ಲಿ ಹೇಳಿದ್ದಾರೆ. ಆದರೆ ರಾಜ್ಯ ಸರ್ಕಾರಗಳ ಜೊತೆ ಅದು ರಾಜ್ಯ ಯೋಜನೆಯ ಗಾತ್ರ ಮಾತ್ರವಲ್ಲದೆ ರಾಷ್ಟ್ರೀಯ ಯೋಜನೆಯ ಗುರಿಗಳು, ಕಾರ್ಯಕ್ರಮಗಳು ಮುಂತಾದುವನ್ನೂ ಚರ್ಚಿಸಬೇಕಿತ್ತು. ಆದರೆ ಅಂಥ ಚರ್ಚೆಗಳು ನಡೆದುದಕ್ಕೆ ಯಾವ ಆಧಾರವೂ ಇಲ್ಲ. ಪ. ಬಂಗಾಳ ಸರ್ಕಾರವು ತನ್ನ ಸ್ವಂತ ಇಚ್ಛೆಯಿಂದ, ಇಂಥದನ್ನು ಚರ್ಚಿಸಲು ಆಯೋಗವನ್ನು ಭೇಟಿಮಾಡಿತು. ಕೆಲವು ಪ್ರಮುಖ ವಿಚಾರಗಳನ್ನು ಚರ್ಚಿಸಲು ಎತ್ತಿಕೊಂಡಾಗ ಅದಕ್ಕೆ ಅವಕಾಶವಿಲ್ಲವೆಂದು ಹೇಳಲಾಯಿತು.

ಅಂತರ ಪ್ರಾದೇಶಿಕ ಹಂಚಿಕೆಗಳು ಮುಂತಾದ ವಿಚಾರಗಳ ಬಗ್ಗೆ ಈಗ ಚರ್ಚೆ ಅವಶ್ಯಕವಾಗಿದೆ. ಬಿಹಾರ, ಮಧ್ಯಪ್ರದೇಶ, ಒರಿಸ್ಸಾ ಮತ್ತು ಪ. ಬಂಗಾಳ ಮುಂತಾದ ರಾಜ್ಯಗಳಲ್ಲಿ ಬಡತನ ತೀರಾ ಹೆಚ್ಚು ಮಟ್ಟದಲ್ಲಿ ಇದೆ ಅಥವಾ ಸಂಪನ್ಮೂಲಗಳನ್ನು ಬಳಸಿಕೊಳ್ಳಲು ತುಂಬ ಮಿತಿಗಳಿವೆ. ದೇಶದ ಭವಿಷ್ಯದ ಆರ್ಥಿಕ ಬೆಳವಣಿಗೆಗೆ ಅರ್ಥಪೂರ್ಣ ಚೌಕಟ್ಟನ್ನು ರೂಪಿಸಬೇಕಾದರೆ ಇಂಥದನೆಲ್ಲ ಚರ್ಚಿಸಬೇಕಿತ್ತು. ಯೋಜನಾ ಆಯೋಗ ಬೇರೆ ರೀತಿ ಯೋಚಿಸಿದೆ.

ಆದರೆ ಇಡೀ ಚರ್ಚೆ ನಡೆದದ್ದು ಕೇಂದ್ರದಿಂದ ರಾಜ್ಯ ಯೋಜನೆಗಳಿಗೆ ಎಷ್ಟರಮಟ್ಟಿಗೆ ಸಹಾಯಿಸಿಗುತ್ತದೆ ಎಂಬ ವಿಚಾರದ ಬಗ್ಗೆ ಮಾತ್ರ. ರಾಜ್ಯಗಳ ಜೊತೆ ಸಾಕಷ್ಟು ಸಮಾಲೋಚನೆ ನಡೆಸುವುದು ತೀರ ಮುಖ್ಯ. ಏಕೆಂದರೆ ಆಯೋಗವು ಕೇಂದ್ರ ಸರ್ಕಾರದ ಒಂದು ಭಾಗ. ಆದರ ಅಭಿಪ್ರಾಯಗಳು ಕೇಂದ್ರದ ಅಭಿಪ್ರಾಯಗಳೇ ಆಗಿರುತ್ತವೆ.

ರಾಜಕೀಯದಲ್ಲಿ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ರಚನೆ ಇರುವುದರಿಂದ ನಮ್ಮ ದೇಶದಲ್ಲಿ ಯೋಜನೆಯ ಮಿತಿಗಳು ನಮಗೆ ಗೊತ್ತು. ಆದರೂ ಕೂಡ ಜನತೆಗೆ ಪರಿಹಾರವನ್ನು ಒದಗಿಸುವ ಕೆಲವು ಕ್ರಮಗಳನ್ನು ಕೈಗೊಳ್ಳಲು ಅವಕಾಶವಿದೆ. ಆದರೆ ಈ ಉದ್ದೇಶದ ಬಗ್ಗೆ ಯೋಜನೆಯ ಕರಡು ತೀರ ಸ್ವಲ್ಪ ಬೆಳಕನ್ನು ಚೆಲ್ಲುತ್ತದೆ. ಬೆಳೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನ ಕಾರಣಗಳು ಕೇಂದ್ರ ಸರ್ಕಾರ ಮತ್ತು ಊಳಿಗಮಾನ್ಯ-ಬಂಡವಾಳಶಾಹಿ ವರ್ಗಗಳಿಗೆ ಅರ್ಥವಾಗುವುದಿಲ್ಲವಾದ್ದರಿಂದ ಇವುಗಳನ್ನು ಅಲ್ಲಿ ಹೆಸರಿಸಿಯೇ ಇಲ್ಲ.

ಮೂವತ್ತು ಚಿಲ್ಲರೆ ವರ್ಷಗಳಿಂದ ಆರ್ಥಿಕ ಬೆಳವಣಿಗೆಯ ದರವು ಕೇವಲ 1.3ರಷ್ಟಿದೆ. ಮೂರನೇ ಜಗತ್ತಿನ ರಾಜ್ಯಗಳಲ್ಲಿ ಕೂಡ ನಾವು ತೀರ ಬಡವರಾಗಿ ಉಳಿದಿದ್ದೇವೆ. ಈ ಅತಿಕಡಿಮೆ ಬೆಳವಣಿಗೆಯು ಸಹ ವರ್ಗಗಳು ಮತ್ತು ಪ್ರದೇಶಗಳ ನಡುವೆ ಅಸಮಾನವಾಗಿ ಹಂಚಿಹೋಗಿದೆ. ಬಡಜನತೆಯನ್ನು ಅವರ ಆಸ್ತಿ ಮತ್ತು ಅವಕಾಶಗಳಿಂದ ದೂರ ವಿಡಲಾಗಿದೆ. ಇದರಿಂದ ದೇಶದ ಜನಸಂಖ್ಯೆ 680ಮಿಲಿಯನ್ ಇದ್ದರೂ ಆಂತರಿಕ ಮಾರುಕಟ್ಟೆ ಬೆಳೆದಿಲ್ಲ. ಬಡವರಿಗೆ ಕೊಳ್ಳುವ ಶಕ್ತಿ ಇಲ್ಲ.

ಆದರೆ ಭೂಸುಧಾರಣೆಗಳು, ಗೋಬ್ಬರ ಮತ್ತು ಸಾಲಗಳ ಸರಿಯಾದ ವಿತರಣೆ, ಅಂತರರಾಷ್ಟ್ರೀಯ ಸಂಸ್ಥೆಗಳನ್ನು ನಿಯಂತ್ರಿಸುವುದು, ದೊಡ್ಡ ಗುತ್ತೇದಾರಿ ಸಂಸ್ಥೆಗಳು ಮತ್ತು ದೊಡ್ಡ ವ್ಯಾಪಾರಿಗಳನ್ನು ನಿಯಂತ್ರಿಸುವುದು, ಸಾರ್ವಜನಿಕ ವಿತರಣೆಯ ಸಮರ್ಪಕ ವ್ಯವಸ್ಥೆ ಇವು ಆಗದೆ ಬಡವರಿಗೆ ಕೊಳ್ಳುವಶಕ್ತಿ ಬರುವುದಿಲ್ಲ. ಆದರೆ ಯೋಜನೆಯ ಕರಡಿನಲ್ಲಿ ಎಷ್ಟು ಹುಡುಕಿದರೂ ಈ ಪ್ರಮುಖ ವಿಚಾರಗಳ ಪ್ರಸ್ತಾಪ ಇಲ್ಲ. ಅಥವಾ ಸರಿಯಾಗಿ ಚರ್ಚೆ ಆಗಿಲ್ಲ.

ಭೂಸುಧಾರಣೆಗಳು ನಿಜಕ್ಕೂ ಪ್ರಮುಖವಾದವು. ಇಡೀ ಕರಡು ದಾಖಲೆಯಲ್ಲಿ ಅದರ ಬಗ್ಗೆ ಒಂದು ಸಣ್ಣ ಉಲ್ಲೇಖ ಇದೆಯಷ್ಟೆ. ಕೃಷಿ ಉತ್ಪನ್ನದ ಹೆಚ್ಚಳಕ್ಕೂ ಭೂಸಂಬಂಧಗಳ ಪುನರ್‌ವ್ಯವಸ್ಥೆಗೂ ಹತ್ತಿರದ ಸಂಬಂಧ ಇದೆ ಎಂಬುದರ ತಿಳುವಳಿಕೆಯೇ ಅಲ್ಲಿಲ್ಲ.

ಸ್ಥಿರವಾದ ಆರ್ಥಿಕ ಬೆಳವಣಿಗೆ ಆಗಬೇಕಾದರೆ ಸ್ಥಿರವಾದ ಬೆಲೆಗಳು ಇರಬೇಕು. ಆದರೆ ಕಳೆದ ಎರಡು ವರ್ಷಗಳಲ್ಲಿ ಬೆಲೆಗಳು ಒಂದಿಷ್ಟೂ ಸ್ಥಿರವಾಗಿಲ್ಲ. ಹಣದುಬ್ಬರ ವಿಪರೀತ ಹೆಚ್ಚುತ್ತಿದೆ. ಯೋಜನೆಯ ಗಾತ್ರವನ್ನೂ ಮೀರಿ ಹಣದುಬ್ಬರ ಬೆಳೆದಿದೆ. ಇದಕ್ಕಾಗಿ ವಿಧಿಸಿರುವ ಪರೋಕ್ಷ ತೆರಿಗೆಗಳು ಬಡವರ ಮೇಲೆ ಬೀಳುತ್ತವೆ.

ಸ್ವಾವಲಂಬನೆ ಎಂಬುದನ್ನು ನೀತಿಯ ನಿರ್ದಿಷ್ಟ ಉದ್ದೇಶ ಎಂದು ಹೇಳಲಾಗಿದ್ದರೂ ಇದನ್ನು ಆಗುಮಾಡಿಸಲು ಯಾವ ನಿರ್ದಿಷ್ಟ ಸಾಧನಗಳನ್ನು ಬಳಸಬೇಕು ಎಂಬುದರ ಬಗ್ಗೆ ಕರಡಿನಲ್ಲಿ ಏನನ್ನೂ ಹೇಳಿಲ್ಲ. ಇದರ ಬದಲು ಯೋಜನಾವೆಚ್ಚದ ಸುಮಾರು 10,000 ಕೋಟಿ ರೂಪಾಯಿಗಳನ್ನು ಹೊರಗಿನ ಮೂಲದಿಂದ ಒದಗಿಸಿಕೊಳ್ಳುವ ಸಲಹೆಯಿಂದ ಸ್ವಾವಲಂಬನೆಯ ಉದ್ದೇಶ ದೂರವಾಗುತ್ತದೆ.

ಕರಡಿನ ವರ್ಗಸ್ವಭಾವ ಇಲ್ಲೇ ಎದ್ದು ಕಾಣುವುದು. ಸ್ವಾವಲಂಬನೆಯು, ಗುತ್ತೇದಾರಿಗಳ ಹಿತಾಸಕ್ತಿಗಳಿಗೆ ಹೊಂದಿಕೊಳ್ಳುವುದಿಲ್ಲ. ಸ್ವಾವಲಂಬನೆ ಆಗಬೇಕಾದರೆ ಆಂತರಿಕ ಬಳಕೆಯ ಪುನರ್‌ವ್ಯವಸ್ಥೆ ಆಗಬೇಕಾಗುತ್ತದೆ. ತಾಂತ್ರಿಕತೆ ಭೂಸಂಬಂಧ ಬದಲಾಗಬೇಕಾಗುತ್ತದೆ. ಆಯೋಗಕ್ಕೆ ಆಸಕ್ತಿಯಿದ್ದರೆ, ರಾಜ್ಯಸರ್ಕಾ

ಜ್ಯೋತಿಬಸು

ರದ ನೀತಿಗಳ ನಡೆವೆಯೂ ಪ. ಬಂಗಾಳದಲ್ಲಿ ನಾವು ನಡೆಸುತ್ತಿರುವ ಪ್ರಯೋಗಗಳನ್ನು ಗಮನಿಸಲಿ, ರಫ್ತು ಅಭಿವೃದ್ಧಿಗೆ, ಆಯೋಗ ಮತ್ತು ಕೇಂದ್ರಸರ್ಕಾರಗಳು ತೋರಿಸುತ್ತಿರುವ ಕಾತುರವೂ ಸಹ ಸ್ವಾವಲಂಬನೆ, ಉದ್ಯೋಗ, ವೇತನ ವಿತರಣೆ ಮುಂತಾದ ಗುರಿಗಳನ್ನು ಕೆಡಿಸುತ್ತದೆ.

ವೇತನ ಅಸಮಾನತೆಗಳು, ಬಡತನ, ನಿರುದ್ಯೋಗ ಇವುಗಳನ್ನು ಕಡಿಮೆಮಾಡಬೇಕಾದರೆ, ಸಮಗ್ರ ಗ್ರಾಮೀಣ ಬೆಳವಣಿಗೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ, ಕನಿಷ್ಠ ಅಗತ್ಯಗಳ ಕಾರ್ಯಕ್ರಮ ಇವುಗಳ ಮೇಲೆ ಹೆಚ್ಚು ಒತ್ತುಕೊಡಬೇಕೆಂದು ಯೋಜನಾಕರಡು ಹೇಳುತ್ತದೆ. ಆದರೆ ಈ ಕಾರ್ಯಕ್ರಮಗಳನ್ನು ಇದುವರೆಗೆ ತಡೆಹಿಡಿದಿದ್ದ ಕಾರಣಗಳ ಬಗ್ಗೆ ಅದು ಏನನ್ನೂ ಹೇಳುವುದಿಲ್ಲ. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮವನ್ನು ಬ್ಯಾಂಕುಗಳ ಹಣ ಸರಬರಾಜಿನ ಜೊತೆ ಸಂಬಂಧಿಸಲಾಗಿದೆ. ಇದರಿಂದ ಇದು ಅನೇಕ ಘಾತಕ ಶಕ್ತಿಗಳ ಕೈಗೆ ಸಿಗುವ ಸಂಭವವಿದೆ. ದುಡಿಮೆಗಾಗಿ ಧಾನ್ಯ ಎಂದು ಹೆಸರಾಗಿರುವ ರಾಷ್ಟ್ರೀಯ ಉದ್ಯೋಗ ಕಾರ್ಯಕ್ರಮವು ಈಗ ಕುಸಿತದ ಅಂಚಿನಲ್ಲಿದೆ. ಏಕೆಂದರೆ ಧಾನ್ಯ ಸರಬರಾಜಿನಲ್ಲಿ ಈಗ ತೀವ್ರ ಕಡಿತ ಉಂಟಾಗಿದೆ ಅಲ್ಲದೆ ರಾಜ್ಯಗಳು ಶೇ. 50ರ ಧಾನ್ಯ ಸರಬರಾಜನ್ನು ವಹಿಸಕೊಳ್ಳಬೇಕೆಂಬ ಒತ್ತಾಯ ಇದೆ.

ಕೃಷಿಉತ್ಪನ್ನಗಳ ಬೆಂಬಲ ಬೆಲೆಯ ಬಗ್ಗೆಯೂ ಆಯೋಗವು ಅದೇ ರೀತಿಯ ವರ್ಗಪ್ರವೃತ್ತಿಯನ್ನು ಪ್ರದರ್ಶಿಸಿದೆ. ಕೃಷಿ ಸರಕುಗಳ ಬೆಲೆಯನ್ನು ಸರಿಯಾದ ಮಟ್ಟದಲ್ಲಿ ಇಡುವುದಾಗಿ ಘೋಷಿಸಲಾಗಿದೆ. ಆದರೆ ಈ ಉದ್ದೇಶವನ್ನು ಸಾಧಿಸಲು ಯಾವ ನೀತಿಕ್ರಮಗಳನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ಕರಡು ಏನನ್ನೂ ಹೇಳಿಲ್ಲ.

ಸಾರ್ವಜನಿಕ ವಿತರಣಾವ್ಯವಸ್ಥೆಯನ್ನು ವೃದ್ಧಿಪಡಿಸಬೇಕೆಂದು ಕರಡು ಹೇಳುತ್ತದೆ. ಆದರೆ ಇದನ್ನು ಪರಿಣಾಮಕಾರಿಯಾಗಿಸಲು ಏನು ಮಾಡಬೇಕೆಂದು ಹೇಳಿಲ್ಲ. ಸರಕು ಕಾರ್ಪೋರೇಷನ್‌ಗಳ ಆರಂಭದಿಂದ ಮುಖ್ಯ ಸಮಸ್ಯೆ ನೀಗುವುದಿಲ್ಲ. ಸಾರ್ವಜನಿಕ ಸಂಗ್ರಹ ವ್ಯವಸ್ಥೆ ಸರಿಯಾಗಿಲ್ಲದಿದ್ದರೆ ಸಾರ್ವಜನಿಕ ವಿರತಣೆಯೂ ಸರಿಯಾಗಿರುವುದಿಲ್ಲ.

ಕೇಂದ್ರವಲಯಕ್ಕೆ ಮೀಸಲಾಗಿಟ್ಟಿರುವ ಹಣವನ್ನು ಪ್ರಾದೇಶಿಕವಾಗಿ ಹಂಚುವುದರಿಂದ ಈಗಿರುವ ಅಸಮಾನತೆ ಇನ್ನಷ್ಟು ಹೆಚ್ಚುತ್ತದೆ.

ಮಹಾರಾಷ್ಟ್ರ, ಗುಜರಾಥ್‌ಗಳಲ್ಲಿ ಆರಂಭಿಸಬೇಕಾಗಿರುವ ಪೆಟ್ರೋಕೆಮಿಕಲ್ ಸ್ಥಾಪನೆಗಳಿಗೆ ಕೇಂದ್ರವಲಯದ ಹಣಭಾಗದಲ್ಲಿ ಅವಕಾಶ ಮಾಡಿಕೊಡಲಾಗಿದೆ. ಆದರೆ ಪ. ಬಂಗಾಳದಲ್ಲಿ ಉದ್ದೇಶಿಸಿದ ಸ್ಥಾಪನೆಗೆ ಕೊಟ್ಟಿಲ್ಲ. 1981-82ರಲ್ಲಿ ವಾರ್ಷಿಕ ಯೋಜನೆಗೆ ಎಲ್ಲ ರಾಜ್ಯಗಳಿಗೂ ಹಿಂದಿನ ವರ್ಷಗಳಿಗಿಂತ ಹಣ ಸಹಾಯ ಹೆಚ್ಚಿಸಿದ್ದರೆ. ಪ. ಬಂಗಾಳಕ್ಕೆ ಮಾತ್ರ ಕಡಿಮೆಮಾಡಲಾಗಿದೆ.

ಇನ್ನೆಷ್ಟು ಆಳಕ್ಕೆ ಈ ದೇಶವನ್ನು ತಳ್ಳಲು ಉದ್ದೇಶಿಸಿದೆ ಎಂದು ನಾನು ಕೇಂದ್ರವನ್ನು ಕೇಳಬೇಕಾಗಿದೆ.

●

ಎಲ್.ಐ.ಸಿ. ಕಾರ್ಮಿಕರ ಹೋರಾಟಕ್ಕೆ ಬೆಂಬಲ

ತಾ. 4-3-1981ರಂದು ಉಡುಪಿಯ ವಿ.ಜೆ.ಯು. ಕ್ಲಬ್ ಸಭಾಂಗಣದಲ್ಲಿ ನಡೆದ, ಉಡುಪಿಯ, ಹಾಗೂ ಅಕ್ಕಪಕ್ಕದ ಕಾರ್ಮಿಕ ನಾಯಕರುಗಳ ಮತ್ತು ನೌಕರರ ಒಂದು ಬೃಹತ್ ಸಮಾವೇಶದಲ್ಲಿ ಜೀವವಿಮಾ ನಿಗಮದಲ್ಲಿ ಕಾರ್ಮಿಕ ಹಕ್ಕುಗಳ ಮೇಲೆ ನಡೆಯುತ್ತಿರುವ ದಬ್ಬಾಳಿಕೆಯ ಕ್ರಮ ಹಾಗೂ ಕೇಂದ್ರ ಸರ್ಕಾರ ಬೆಂಗಳೂರಿನ ಮುಷ್ಕರ ನಿರತ ಕಾರ್ಮಿಕರ, ರೈಲ್ವೆ ಲೋಕೋ ಸಿಬ್ಬಂದಿ ಹಾಗೂ ಸಾಮಾನ್ಯ ವಿಮೆ ನೌಕರರ ವಿವಾದಗಳಲ್ಲಿ ತಳೆದಿರುವ ಧೋರಣೆಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು.

ವಿಮಾ ನೌಕರರ ಸಂಘಟನೆಗಳ ಪರವಾಗಿ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಶ್ರೀ ಪಿ. ವಿಶ್ವನಾಥ ರೈ ಅವರು, ವಿಮಾ ನೌಕರರು 1974ರಲ್ಲಿ ಮಾಡಿಕೊಂಡ ಒಪ್ಪಂದದಂತೆ ಅನುಭವಿಸುತ್ತಿರುವ ಬೋನಸ್ ಮುಂತಾದ ಸವಲತ್ತುಗಳನ್ನು ಮೊಟಕುಗೊಳಿಸಿರುವುದು ನ್ಯಾಯಬಾಹಿರವೆಂದು ಸುಪ್ರೀಂ ಕೋರ್ಟು ತೀರ್ಪಿತ್ತಿರುವುದನ್ನು, ಇದನ್ನು ಒಂದು ಅಧ್ಯಾದೇಶದ ಮುಖಾಂತರ ಸರ್ಕಾರ ನಿಷ್ಕ್ರಿಯಗೊಳಿಸುವ ಕ್ರಮ ಕೈಗೊಂಡಿರುವುದನ್ನು ವಿವರಿಸಿದರು. ವಿಮಾ ನೌಕರರ ಸಂಘಟನೆಗಳ ಪರವಾಗಿ ಮಾತನಾಡುತ್ತಾ ಶ್ರೀ ಎಚ್. ಶಿವರಾಮ ಭಟ್ಟರು, ಎಲ್.ಐ.ಸಿ.ಯಲ್ಲಿ ಕಾರ್ಮಿಕ ಹಕ್ಕುಗಳನ್ನು ಕಿತ್ತೊಗೆಯುವ ಪ್ರಯತ್ನ, ಬೆಂಗಳೂರಿನ ಕಾರ್ಮಿಕರಿಗೆ ಒಪ್ಪಂದದಂತೆ ಕೊಡಬೇಕಾಗಿರುವ ಸವಲತ್ತುಗಳನ್ನು ಕೊಡದಿರುವ, ರೈಲ್ವೆ ನೌಕರರ ಹೋರಾಟವನ್ನು ಹತ್ತಿಕ್ಕುವ, ಸಾಮಾನ್ಯ ವಿಮೆಯ ನೌಕರರಿಗೆ ಏಕಪಕ್ಷೀಯವಾಗಿ ಸೇವಾನಿಯಮಗಳನ್ನು ಮಾಡುವ ಸರ್ಕಾರದ ಧೋರಣೆಯ ಹಿನ್ನೆಲೆಯಲ್ಲಿ, ಸರ್ಕಾರ ಪ್ರಜಾತಂತ್ರ ಮೌಲ್ಯಗಳನ್ನು ತಿರಸ್ಕರಿಸಿ ಸರ್ವಾಧಿಕಾರದತ್ತ ಸಾಗುತ್ತಿರುವ ಸೂಚನೆಯಾಗಿದ್ದು. ಈ ನೀತಿಯ ವಿರುದ್ಧ ಕಾರ್ಮಿಕರು ಸಂಘಟಿತರಾಗಿ ಹೋರಾಡಬೇಕಾದ ಅವಶ್ಯಕತೆಯನ್ನು ವಿವರಿಸಿದರು. ಶ್ರೀ ಕೆ. ವಿ. ನಾರಾಯಣ ಅವರು ಎಲ್.ಐ.ಸಿ. ನೌಕರರ ವಿರುದ್ಧ ಮಾಡಲಾಗುತ್ತಿರುವ ದುರುದ್ದೇಶಪೂರಿತ ಅಪಪ್ರಚಾರ ಹಾಗೂ ವಾಸ್ತವ ಸ್ಥಿತಿಯನ್ನು ವಿವರಿಸಿ, ಕಾರ್ಮಿಕ ಹಕ್ಕುಗಳ ರಕ್ಷಣೆಗಾಗಿ ಹೋರಾಟ ನಡೆಸಬೇಕಾಗಿರುವುದನ್ನು ವಿವರಿಸಿದರು. ಶ್ರೀ ಆರ್. ಎ. ರಾವ್ ಸರ್ಕಾರ ಅನುಸರಿಸುತ್ತಿರುವ ಬಂಡವಾಳಶಾಹಿ ನೀತಿಯಿಂದಾಗಿ, ಕಾರ್ಮಿಕ ವಿರೋಧಿ ಧೋರಣೆಯನ್ನು ತಳೆದಿರುವದನ್ನು ವಿವರಿಸಿ ನ್ಯಾಯಾಲಯಗಳು ನೌಕರರ ಹಕ್ಕುಗಳನ್ನು ಪದೇ ಪದೇ ಎತ್ತಿಹಿಡಿದರೂ ಸರ್ಕಾರ ಅದನ್ನು ಮನ್ನಿಸದಿರುವುದರ ವಿರುದ್ಧ ನೌಕರರ ಹೋರಾಟದಲ್ಲಿ ಎಲ್ಲಾ ಕಾರ್ಮಿಕ ವರ್ಗದ ಸಹಕಾರದ ಅವಶ್ಯಕತೆಯನ್ನು ವಿವರಿಸಿದರು.

ಎ.ಐ.ಟಿ.ಯು.ಸಿ. ಜಿಲ್ಲಾ ಘಟಕದ ಪರವಾಗಿ ಶ್ರೀ ಉಮಾನಾಥ

(7ನೇ ಪುಟ ನೋಡಿ)

ಕೇಂದ್ರದ್ದು ನಿಷ್ಕ್ರಿಯ ಸರ್ಕಾರ
ಜ್ಯೋತಿಬಸು ಬಣ್ಣನೆ

ಕೇಂದ್ರದಲ್ಲಿರುವ ಇಂದಿರಾ ಕಾಂಗ್ರೆಸ್ ಸರ್ಕಾರವು ಸಂಪೂರ್ಣವಾಗಿ ನಿಷ್ಕ್ರಿಯ ಸರ್ಕಾರವಾಗಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಸಿ.ಪಿ.ಐ.(ಎಂ)ನ ಪಾಲಿಟ್ ಬ್ಯೂರೊ ಸದಸ್ಯ ಕಾಂ. ಜ್ಯೋತಿ ಬಸು ಗಂಭೀರ ಆಪಾದನೆ ಮಾಡಿದರು.

ರಾಜ್ಯ ಸಿ.ಐ.ಟಿ.ಯು.ನ ಮೂರನೇ ಸಮ್ಮೇಳನದಲ್ಲಿ ಭಾಗವಹಿಸಿ ಕಲ್ಕತ್ತೆಗೆ ಹಿಂತಿರುಗುವ ಮುನ್ನ ಕಾಂ. ಬಸು ಪತ್ರಿಕಾಗೋಷ್ಠಿಯೊಂದನ್ನು ಉದ್ದೇಶಿಸಿ ಮಾತನಾಡಿದರು.

ಬೆಂಗಳೂರಿನ ಸಾರ್ವಜನಿಕ ಉದ್ಯಮಗಳ ಕಾರ್ಮಿಕರು ಎರಡು ತಿಂಗಳಿಂದ ಮುಷ್ಕರ ನಿರತರಾಗಿದ್ದರೂ ಕಾರ್ಮಿಕ ನಾಯಕರನ್ನು ಮಾತುಕತೆಗೂ ಕರೆಯದ ಕೇಂದ್ರಸರ್ಕಾರವು ನಿಷ್ಕ್ರಿಯವಾಗಿದೆಯಲ್ಲದೆ ಮತ್ತೇನು ಎಂದು ಪ್ರಶ್ನಿಸಿದರು. ರಾಷ್ಟ್ರೀಯ ಅಭಿವೃದ್ಧಿ ಕೌನ್ಸಿಲ್‌ನ ಉಪಾಧ್ಯಕ್ಷರಾಗಿರುವ ತಿವಾರಿಯವರನ್ನು ಕೇಂದ್ರ ಕಾರ್ಮಿಕ ಸಚಿವರನ್ನಾಗಿಯೂ ನೇಮಿಸಿರುವ ಇಂದಿರಾಗಾಂಧಿಯವರ ಬೇಜವಾಬ್ದಾರಿತನವನ್ನು ಕಾಂ. ಬಸು ಉಗ್ರವಾಗಿ ಟೀಕಿಸಿದರು. ಅಭಿವೃದ್ಧಿ ಕೌನ್ಸಿಲ್‌ನಂತಹ ಮುಖ್ಯ ಜವಾಬ್ದಾರಿ ಕೆಲಸಹೊರುವ ವ್ಯಕ್ತಿಗೆ ಬೇರೊಂದು ಕೆಲಸವನ್ನು ವಹಿಸುವುವ ಔಚಿತ್ಯವನ್ನು ಕಾಂ. ಬಸು ಪ್ರಶ್ನಿಸಿದರು.

ತಮ್ಮ ರಾಜ್ಯಕ್ಕೆ ಸಂಬಂಧಿಸಿದ ಎಲೆಕ್ಟ್ರಾನಿಕ್ಸ್ ಮತ್ತು ಹಡಗು ವಿಭಾಗದ ಯೋಜನೆಗಳೂ ಸೇರಿದಂತೆ ಅನೇಕ ಕೆಲಸಗಳನ್ನು ಪೂರೈಸಿಲ್ಲ ಎಂದ ಬಸು, ದಿಲ್ಲಿ ಸರ್ಕಾರದಲ್ಲಿ ಏನೊಂದೂ ಚಲಿಸುತ್ತಿಲ್ಲ ಎಂದು ನುಡಿದರು.

ಸರ್ಕಾರ ಉರುಳಿಸಲು ಸಂಚು

ಕಾರ್ಯಪ್ರವೃತ್ತ ಸರ್ಕಾರವೊಂದನ್ನು ಒದಗಿಸುವ ವಚನಕೊಟ್ಟು 1980ರಲ್ಲಿ ಮತ್ತೆ ಅಧಿಕಾರಕ್ಕೆ ಬಂದ ಇಂದಿರಾ ಸರ್ಕಾರವು ವಿರೋಧ ಪಕ್ಷಗಳ (ಮುಖ್ಯವಾಗಿ ಪ. ಬಂಗಾಳದ ಎಡರಂಗ) ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸುವ ಕೆಲಸವೊಂದನ್ನು ಬಿಟ್ಟು ಮತ್ತೇನನ್ನೂ ಮಾಡುತ್ತಿಲ್ಲ ಎಂದು ಬಸು ಟೀಕಿಸಿದರು.

ಚುನಾವಣೆ ಮೂಲಕ ಆಯ್ಕೆಗೊಂಡ ಸರ್ಕಾರಗಳನ್ನು ಉರುಳಿಸುವ ಉದ್ದೇಶ ತಮಗಿಲ್ಲ ಎಂದು ಇಂದಿರಾಗಾಂಧಿ ಹೇಳುತ್ತಿದ್ದರೂ ಅವರ ಪಕ್ಷದ ಪ. ಬಂಗಾಳ ನಾಯಕರು ಸರ್ಕಾರ ಉರುಳಿಸುವ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ (ಐ)ನ ಅಧ್ಯಕ್ಷೆಯೂ ಆಗಿರುವ ಆಕೆ ತನ್ನ ಸದಸ್ಯರನ್ನು ಏಕೆ ಹತೋಟಿಯಲ್ಲಿ ಇಟ್ಟುಕೊಳ್ಳುತ್ತಿಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್ (ಐ) ಪಕ್ಷದಲ್ಲಿ ಗುಂಪುಗಾರಿಕೆ, ಒಳಗುಂಪುಗಾರಿಕೆಯ ಕಚ್ಚಾಟಗಳು ರಾಷ್ಟ್ರದ ಎಲ್ಲಾಕಡೆ ಕಾಣುತ್ತಿರುವಾಗ ಇಂತಹ ಸ್ವಯಂ ಕಲಹದ ಪಕ್ಷವೊಂದರಿಂದ ದೇಶಕ್ಕೆ ಸುಭದ್ರ ಸರ್ಕಾರ ಹೇಗೆ ಸಾಧ್ಯ ಎಂದೂ ಕಾಂ. ಬಸು ಕೇಳಿದರು.

ಹಿಂದಿನ ಮತ್ತು ಈಗಿನ ಅನುಭವಗಳನ್ನು ನೋಡಿದರೆ ಕಾಂಗ್ರೆಸ್ ಪಕ್ಷಕ್ಕೆ ಪ್ರಜಾಸತ್ತೆಯಲ್ಲಿ " ನಂಬಿಕೆಯಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ಅಭಿಪ್ರಾಯಪಟ್ಟ ಮುಖ್ಯಮಂತ್ರಿ ಬಸು, ಜನರನ್ನು ಸರ್ವಾಧಿಕಾರಿ ಕಾಂಗ್ರೆಸ್ ವಿರುದ್ಧ ಜಾಗೃತಗೊಳಿಸುವುದೊಂದೇ ಪ್ರಜಾಪ್ರಭುತ್ವ ರಕ್ಷಣೆಯ ಮಾರ್ಗ ಎಂದರು.

ಸ್ಪರ್ಧೆ ಇರಲಿ

ತಮ್ಮ ಸರ್ಕಾರವು ಕೇಂದ್ರದೊಂದಿಗೆ ಘರ್ಷಣೆಗೆ ಇಳಿಯುತ್ತಿದೆ ಎಂಬ ಪ್ರಚಾರವನ್ನು ಅಲ್ಲಗಳೆದ ಕಾಂ. ಬಸು, ಕೇಂದ್ರವೂ ಸೇರಿದಂತೆ ಕಾಂಗ್ರೆಸ್(ಐ) ಮತ್ತು ವಿವಿಧ ವಿರೋಧ ಪಕ್ಷಗಳು ನಡೆಸುತ್ತಿರುವ ಸರ್ಕಾರಗಳ ನಡುವೆ ಘರ್ಷಣೆಗೆ ಬದಲು ಸಾಧನೆಯ ಸ್ಪರ್ಧೆ ಇರಲಿ. ಯಾರು ದಕ್ಷ ಸರ್ಕಾರವನ್ನು ಕೊಡುತ್ತಾರೆ? ಯಾವ ಪಕ್ಷದ ಸರ್ಕಾರ ಜನರ ಕಷ್ಟಗಳಿಗೆ ಪರಿಹಾರ ನೀಡುತ್ತದೆ ಎಂಬುದನ್ನು ಜನರೇ ನಿರ್ಧರ ಮಾಡಲಿ ಎಂದು ಬಸು ನುಡಿದರು.

ಅಧ್ಯಕ್ಷೀಯ ಮಾದರಿಗೆ ವಿರೋಧ

ರಾಜ್ಯದ ವಕೀಲರುಗಳ ಸಂಘದಲ್ಲಿ ಜರುಗಿದ ಅನೌಪಚಾರಿಕ ಸಭೆಯನ್ನು ಉದ್ದೇಶಿಸಿ ನಂತರ ಮಾತನಾಡಿದ ಕಾಂ. ಜ್ಯೋತಿಬಸು ತಮ್ಮ ಸರ್ಕಾರ ಹಾಗೂ ತಮ್ಮ ಪಕ್ಷ ಅಧ್ಯಕ್ಷೀಯ ಮಾದರಿ ಆಳ್ವಿಕೆಗೆ ವಿರೋಧವಾಗಿದೆ ಎಂದು ಹೇಳಿದರು.

ಅಧ್ಯಕ್ಷೀಯ ಮಾದರಿ ಆಳ್ವಿಕೆಗೆ ಸ್ಥಿತ್ಯಂತರ ಹೊಂದಲು ತಮಗೂ ಬಯಕೆ ಇಲ್ಲವೆಂದು ಪ್ರಧಾನಿ ಇಂದಿರಾಗಾಂಧಿಯವರು ಹೇಳಿದರೂ ಅಧ್ಯಕ್ಷ ಮಾದರಿ ವ್ಯವಸ್ಥೆಯ ಬಗ್ಗೆ ರಾಷ್ಟ್ರದಲ್ಲಿ ಚರ್ಚೆ ಶುರು ಮಾಡಲು ಕಾರಣವಾದ ಕಾಂಗ್ರೆಸ್(ಐ) ಪಕ್ಷವೇ ವ್ಯವಸ್ಥೆ ಮಾಡಿದ್ದ ದಿಲ್ಲಿಯ ವಕೀಲರ ಸಮ್ಮೇಳನದಲ್ಲಿ ಇಂದಿರಾ — ಅವರೇ ಭಾಗವಹಿಸಿದ್ದನ್ನು ಬಸು ಅವರು ರಾಜ್ಯದ ವಕೀಲರಿಗೆ ನೆನಪಿಸಿಕೊಟ್ಟರಲ್ಲದೆ, ಮಹಾರಾಷ್ಟ್ರದ ಮುಖ್ಯಮಂತ್ರಿ ಎ. ಆರ್. ಅಂತುಲೆ ಅವರು ಅಧ್ಯಕ್ಷೀಯ ಮಾದರಿ ವ್ಯವಸ್ಥೆ ಬೇಕೆಂದು ಹಗಲು ರಾತ್ರಿ ಹೇಳುತ್ತಿದ್ದಾರೆ. ಇವರನ್ನೇಕೆ ಶ್ರೀಮತಿ ಗಾಂಧಿ ಹತೋಟಿಯಲ್ಲಿ ಇಡುತ್ತಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯಗಳ ಅಧಿಕಾರಗಳನ್ನು ಒಂದೊಂದಾಗಿ ಕೇಂದ್ರವು ಮೊಟಕುಗೊಳಿಸುತ್ತಿರುವುದನ್ನು ತೀವ್ರವಾಗಿ ಆಕ್ಷೇಪಿಸಿದ ಬಸು ಅವರು ರಾಜ್ಯಾಂಗದನ್ವಯ ನಮ್ಮದು ಒಕ್ಕೂಟ ಮಾದರಿಯ ವ್ಯವಸ್ಥೆಯಾದರೂ ಪ್ರಾಯೋಗಿಕವಾಗಿ ಅದು ಏಕಕವಾಗಿದ್ದು ಏಕಾಧಿಕಾರ (ಯೂನಿಟರಿ) ಸರ್ಕಾರದತ್ತ ದೇಶ ಸಾಗುತ್ತಿದೆ ಎಂದರು ಬಸು ಹೇಳಿದರು.

ರಾಜ್ಯದ ಹಕ್ಕುಗಳನ್ನು ಮೊಟಕುಗೊಳಿಸುವ ಇತ್ತೀಚಿನ ಕೇಂದ್ರದ ಪ್ರಯತ್ನಗಳಲ್ಲಿ ರಾಜ್ಯಗಳ ತೆರಿಗೆ ವಿಧಿಸುವ ಹಕ್ಕನ್ನು ಕೇಂದ್ರವೇ ಕಸಿದುಕೊಂಡಿರುವುದು ಒಂದಾಗಿದೆ ಎಂದು ಬಸು ಹೇಳಿದರು.

●

ಎಲ್.ಐ.ಸಿ. ಕಾರ್ಮಿಕರ ಹೋರಾಟಕ್ಕೆ ಬೆಂಬಲ

[6ನೇ ಪುಟದಿಂದ]

ನಾಯಕ್, ಸಿ.ಐ.ಟಿ.ಯು. ಪರವಾಗಿ ಮಾತನಾಡಿದ ಶ್ರೀ ಅಬ್ರಹಾಂ ಕರ್ಕಡ, ಮತ್ತು ಬ್ಯಾಂಕ್ ನೌಕರರ ವಿವಿಧ ಸಂಘಟನೆಗಳ ಪರವಾಗಿ ಮಾತನಾಡಿದ ಶ್ರೀ ರಾಧಾಕೃಷ್ಣ ಆಚಾರ್, (ಎ.ಐ.ಬಿ.ಇ.ಎ.) ಮತ್ತು ಶ್ರೀ ಸಿ.ವಿ. ಕಾಪಂತ್, (ಎನ್.ಸಿ.ಬಿ.ಇ.) ಅವರು ಇಂದು ಎಲ್.ಐ.ಸಿ.ಯಲ್ಲಿ ಸರ್ಕಾರ ಅನುಸರಿಸುತ್ತಿರುವ ಕ್ರಮ ಎಲ್ಲಾ ಕಾರ್ಮಿಕ ವರ್ಗದವರಿಗೂ ಮಾರಕವಾಗಿರುವುದನ್ನು ವಿವರಿಸಿದರು. ಎಲ್.ಐ.ಸಿ.ಯ ಮೊದಲನೆ ವರ್ಗದ ಅಧಿಕಾರಿಗಳ ಸಂಘದ ಪರವಾಗಿ ಮಾತನಾಡಿದ ಶ್ರೀ ಸಿ. ಆರ್. ಭಟ್ಟರು ಹಾಗೂ ಶ್ರೀ ಬಿ. ವಿ. ಕೆದಿಲಾಯರು, ಸರ್ಕಾರದ ಕ್ರಮ ಎಲ್.ಐ.ಸಿ.ಯ ಇತರ ವರ್ಗದ ನೌಕರರಿಗೂ ಮಾರಕವಾಗಿರುವುದಾಗಿಯೂ ಎಲ್.ಐ.ಸಿ.ಯ ಸ್ವಾಯತ್ತತೆಯ ಕಲ್ಪನೆಯನ್ನು ನುಚ್ಚುನೂರಾಗಿಸಿರುವುದನ್ನೂ ವಿವರಿಸದರು.

ಸಮಾವೇಶದಲ್ಲಿ ಮಾತನಾಡಿದ ಎಲ್ಲಾ ಕಾರ್ಮಿಕ ನಾಯಕರು ಇಂದು ಎಲ್.ಐ.ಸಿ ಯಲ್ಲಿ ಸರ್ಕಾರ ಕೈಗೊಳ್ಳುತ್ತಿರುವ ಕ್ರಮ ದೇಶದ ಕಾರ್ಮಿಕಚಳುವಳಿಗೇ ಮಾರಕವಾಗಿರುವುದನ್ನು ಒತ್ತಿಹೇಳಿದ್ದಲ್ಲದೆ. ಈ ಕ್ರಮಗಳ ವಿರುದ್ಧ ಹೋರಾಟದಲ್ಲಿ ತಮ್ಮ ಸಂಪೂರ್ಣ ಬೆಂಬಲವನ್ನು ಸಾರಿದರು.

ಸಮಾವೇಶದಲ್ಲಿ ಒಂದು ಠರಾವನ್ನು ಅಂಗೀಕರಿಸಿ, ಬೆಂಗಳೂರಿನ ಸರಕಾರೀ ಉದ್ಯಮ ಕ್ಷೇತ್ರದ ಕಾರ್ಮಿಕರೊಂದಿಗೆ ಕೂಡಲೇ ಒಪ್ಪಂದಕ್ಕೆ ಬರಬೇಕೆಂತೆಯೂ, ರೈಲ್ವೆ ನೌಕರರ ಮೇಲೆ ಕೈಗೊಂಡ ಎಲ್ಲಾ ದಬ್ಬಾಳಿಕೆಯ ಕ್ರಮವನ್ನು ಹಿಂತೆಗೆಯಬೇಕೆಂತೆಯೂ, ಎಲ್.ಐ.ಸಿ.ಯ ಸೇವಾ ನಿಯಮಗಳನ್ನು ಏಕಪಕ್ಷೀಯವಾಗಿ ನಿಗದಿಗೊಳಿಸುವ ಅಧ್ಯಾದೇಶ ಹಾಗೂ ಮಸೂದೆಯ ಕ್ರಮವನ್ನು ನಿಲ್ಲಿಸಿ ನೌಕರರೊಂದಿಗೆ ಒಪ್ಪಂದವನ್ನು ಮನ್ನಿಸಿ ನ್ಯಾಯಾಲಯದ ಆದೇಶವನ್ನು ಪಾಲಿಸುವಂತೆಯೂ, ಸಾಮಾನ್ಯ ವಿಮೆಯಲ್ಲಿ ಕೂಡಲೇ ಮಾತುಕತೆ ನಡೆಸುವಂತೆಯೂ ಒತ್ತಾಯಿಸಲಾಯಿತು. ಬೆಂಗಳೂರಿನ ಮುಷ್ಕರ ನಿರತ ಕಾರ್ಮಿಕರ ಹಾಗೂ ರೈಲ್ವೆ ಸಿಬ್ಬಂದಿಗಳ ಮೇಲೆ ಕೈಕೊಂಡ ಎಲ್ಲಾ ಬಂಧನಗಳನ್ನೂ ಕೂಡಲೇ ಕೈಬಿಡುವಂತೆಯೂ ಸರಕಾರವನ್ನು ಕೇಳಲಾಯಿತು. ಸರಕಾರ ಕಾರ್ಮಿಕ ವಿರೋಧಿ ನೀತಿಯನ್ನು ಕೂಡಲೇ ನಿಲ್ಲಿಸದಿದ್ದಲ್ಲಿ ದೇಶವ್ಯಾಪಿಯಾಗಿ ಒಂದು ಬೃಹತ್‌ಹೋರಾಟಕ್ಕೆ ಅಣಿಯಾಗುವಂತೆ ಕಾರ್ಮಿಕರಿಗೆ ಕರೆ ನೀಡಲಾಯ್ತು. ಶ್ರೀ ಯು. ಕೆ. ವಸಂತಕುಮಾರ್ ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಹೆಚ್. ಎಸ್. ಹರಿದಾಸ್ ಅವರು ವಂದನಾರ್ಪಣೆ ಮಾಡಿದರು. ೦

ಸಿ. ಐ. ಟಿ. ಯು. ನಾಯಕರಾಗಿ
ಸೂರಿ-ಸಿ.ಎನ್. ಪುನರಾಯ್ಕೆ

ದುಡಿಯುವ ಜನರ ಸಮರ ಶೀಲ ಸಂಘಟನೆಯಾದ ಸೆಂಟರ್ ಆಫ್ ಇಂಡಿಯನ್ ಟ್ರೇಡ್‌ಯೂನಿಯನ್ಸ್‌ನ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಕಾಂ. ಸಿ. ನಂಜುಂಡಪ್ಪ ಮತ್ತು ಅಧ್ಯಕ್ಷರಾಗಿ ಜನಪ್ರಿಯ ಕಾರ್ಮಿಕ ನಾಯಕ ಕಾಂ. ಎಸ್. ಸೂರ್ಯನಾರಾಯಣರಾವ್ ಅವರು ಸರ್ವಾನುಮತದಿಂದ ಪುನರಾಯ್ಕೆಯಾಗಿದ್ದಾರೆ.

ರಾಜ್ಯದಲ್ಲಿನ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾದ ಹರಿಹರದಲ್ಲಿ ಕಳೆದ ವಾರ ಜರುಗಿದ ರಾಜ್ಯ ಸಿ. ಐ. ಟಿ.ಯು.ನ ರಾಜ್ಯಮಟ್ಟದ ಮೂರನೇ ಸಮ್ಮೇಳನದಲ್ಲಿ ಕಾಂ. ಟಿ. ಎಸ್. ಅನಂತರಾಮು ಖಜಾಂಚಿಯಾಗಿ ಆಯ್ಕೆಗೊಂಡರು. ಕಾರ್ಯದರ್ಶಿಗಳಾಗಿ ಕಾಂ. ವಿ.ಜೆ.ಕೆ. ನಾಯರ್, ಮಹಮದ್ ದಸ್ತಗೀರ್ ಮತ್ತು ಬಿ. ಮಾಧವ, ಉಪಾಧ್ಯಕ್ಷರುಗಳಾಗಿ ಕಾಂ. ಎನ್. ಕೆ. ಉಪಾಧ್ಯಾಯ, ಟಿ. ಎಸ್. ವಣಿ, ಕೆ. ಮುಂಷಿಪ್ಪ ಮತ್ತು ಆರ್. ಜಿ. ಸ್ಥಳೇಕರ್ ಆಯ್ಕೆಗೊಂಡರು.

ಸಮ್ಮೇಳನವು 85 ಜನರ ಕೌನ್ಸಿಲ್ ಮತ್ತು 31 ಜನರ ರಾಜ್ಯ ಸಮಿತಿಯನ್ನು ಆಯ್ಕೆ ಮಾಡಿತು.

ರಾಜ್ಯದಲ್ಲಿ 46,444 ಸದಸ್ಯ ಬಲವುಳ್ಳ ಸಿ.ಐ.ಟಿ.ಯು.ವನ್ನು ಪ್ರತಿನಿಧಿಸಿ ಸಮ್ಮೇಳನದಲ್ಲಿ 184 ಪ್ರತಿನಿಧಿಗಳು ಮತ್ತು 88 ವೀಕ್ಷಕರು ಭಾಗವಹಿಸಿದ್ದರು. ಇವರಲ್ಲಿ 15 ಜನ ಮಹಿಳಾ ಪ್ರತಿನಿಧಿಗಳಿದ್ದರು.

'ಐಕ್ಯರಂಗ'ದ ವರದಿಗಾರರೊಂದಿಗೆ ಅನೌಪಚಾರಿಕವಾಗಿ ಮಾತನಾಡಿದ ಸಿ.ಐ.ಟಿ.ಯು. ಪ್ರಧಾನ ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ತಮ್ಮ ಸಂಘಟನೆಯು ಈಗ ರಾಜ್ಯದಲ್ಲಿ 69 ಟ್ರೇಡ್‌ಯೂನಿಯನ್‌ಗಳನ್ನು ಹೊಂದಿದ್ದು, ಇವು ಇಂಜಿನಿಯರಿಂಗ್, ಗಣಿಗಳು, ಬೀಡಿ, ಜವಳಿ, ಪ್ಲಾಂಟೇಷನ್, ಸಾರಿಗೆ, ಬಂದರು ಮತ್ತು ಹಡಗು, ಕಾಫಿ ಸಂಸ್ಕರಣ, ಮುದ್ರಣ, ಗೋಡಂಬಿ ಸಂಸ್ಕರಣ ಹೆಂಚು, ಹೋಟೆಲ್, ಸಿಮೆಂಟ್ ಮತ್ತಿತರ ಕೈಗಾರಿಕೆಗಳು ಹಾಗೂ ಲೋಕೋಪಯೋಗಿ, ಪೌರಸಭೆ ನೌಕರರು ಹಾಗೂ ಇತರೆ ಸೇವೆಗಳಲ್ಲಿ ಇವೆ ಎಂದು ಹೇಳಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬಂದಿದ್ದ ಪ್ರತಿನಿಧಿಗಳಲ್ಲಿ ಹೆಚ್ಚಿನ ಸಂಖ್ಯೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಎಂದೂ ಸಹ ಕಾಂ. ಸಿ. ಎನ್. ಹೇಳಿದರು. ●

ನೀರಿನ ಬವಣೆ

ಕೋಲಾರ ಟೌನ್ ಮತ್ತು ಕೋಲಾರ ಜಿಲ್ಲೆಯಲ್ಲಿ ಕುಡಿಯುವ ನೀರಿನ ತೊಂದರೆ ವಿಪರೀತವಾಗಿದೆ. ಬೇಸಿಗೆ ಇನ್ನೂ ದೂರವಿದ್ದಾಗ್ಯೂ ಈಗಲೇ ನೀರಿಲ್ಲದೇ ಬವಣೆಪಡಬೇಕಾಗಿದೆ. ಸರ್ಕಾರ ಈ ಭೀಕರತೆಯನ್ನು ಅರ್ಥಮಾಡಿಕೊಳ್ಳದೇ ಜನತೆಯೊಂದಿಗೆ ಕಣ್ಣುಮುಚ್ಚಾಲೆಯಾಡುತ್ತಿದೆ.

ಶ್ರವಣಬೆಳಗೊಳದ ಮಹಾಮಸ್ತಕಾಭಿಷೇಕಕ್ಕೆ, ಬೆಂಗಳೂರಿನಲ್ಲಿ ಈಜುಗೊಳಕ್ಕೆ ಲಕ್ಷಾಂತರ, ಕೋಟ್ಯಾಂತರ ಹಣ ಖರ್ಚುಮಾಡುತ್ತಿರುವ ಗುಂಡೂರಾವ್ ಸರ್ಕಾರ ಈ ಹಣದ ಕಾಲುಭಾಗ ಖರ್ಚುಮಾಡಿ ಜನತೆಗೆ ಕುಡಿಯುವ ನೀರು ಒದಗಿಸಲು ಸಾಧ್ಯವಿದೆ.

ತಕ್ಷಣ ಜಿಲ್ಲೆಯಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಆಳಪಡಿಸುವುದು, ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಿಸುವುದು, ಗೋಕುಂಟೆಗಳನ್ನು ಅಗೆಸುವುದು ಇತ್ಯಾದಿ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಸರ್ಕಾರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಪರಿಹಾರ ಕಾಮಗಿರಿ ಕೈಗೊಳ್ಳದಿದ್ದರೆ ಹೋರಾಟ ಪ್ರಾರಂಭಿಸಬೇಕಾಗುವುದೆಂದು ಕೋಲಾರ ಜಿಲ್ಲಾ ರೈತಸಂಘದ ಉಪಾಧ್ಯಕ್ಷ ಕಾಂ. ಆರ್. ವೆಂಕಟರಾಮಯ್ಯ ಎಚ್ಚರಿಸಿದ್ದಾರೆ.

ಜನಜಾಗೃತಿಯೊಂದೇ ಭಾರತ ರಕ್ಷಣೆಯ ದಾರಿ : ಬಸು

(1ನೇ ಪುಟದಿಂದ)

ಸರ್ಕಾರವೆಂದು ಹೆಮ್ಮೆಯಿಂದ ಹೇಳಿದ ಬಸು ಅವರು ರಾಜ್ಯದಲ್ಲಿ ಮುಕ್ತ ಹಾಗೂ ನ್ಯಾಯಯುತ ಚುನಾವಣೆ ಜರುಗಿದರೆ ಸಿ.ಪಿ.ಐ.(ಎಂ) ಮತ್ತು ಇತರೆ ಎಡ ಪಕ್ಷಗಳು ಎಲ್ಲಾ ಕಡೆ ಜಯಗಳಿಸುವುದರಲ್ಲಿ ಸಂದೇಹವಿಲ್ಲ ಎಂದರು.

ಪಂಚಾಯಿತಿಗಳಿಗೆ ಪೂರ್ಣ ಅಧಿಕಾರ

ಕಳೆದ 18 ವರ್ಷಗಳಿಂದ ಕಾಂಗ್ರೆಸ್ (ಐ) ಪಕ್ಷವು ರಾಜ್ಯದ ಪಂಚಾಯಿತಿಗಳಿಗೆ ಚುನಾವಣೆ ನಡೆಸಿರಲಿಲ್ಲ. ತಮ್ಮ ಸರ್ಕಾರವು 1977ರಲ್ಲಿ ಅಧಿಕಾರಕ್ಕೆ ಬಂದನಂತರ ರಾಜ್ಯದ ಎಲ್ಲಾ ಪಂಚಾಯಿತಿಗಳಿಗೆ ಚುನಾವಣೆ ಜರುಗಿದ್ದು ಈ ಚುನಾವಣೆಗಳಲ್ಲಿ ಬೇಸಾಯ ಕೂಲಿಗಾರರು, ಬಡ ರೈತರು, ಸಣ್ಣ ವ್ಯಾಪಾರಿಗಳು ಮತ್ತು ಶಾಲಾಶಿಕ್ಷಕರು ಆಯ್ಕೆಗೊಂಡಿದ್ದಾರೆ. ಪಂಚಾಯಿತಿಗಳಿಗೆ 200 ಕೋಟಿ ರೂ.ಗಳ ಹಣವನ್ನು ಇದುವರೆಗೆ ನೀಡಲಾಗಿದ್ದು ಗ್ರಾಮೀಣ ಅಭಿವೃದ್ಧಿ ಕಾರ್ಯವನ್ನು ಪಂಚಾಯಿತಿಗಳೇ ಈಗ ನಿರ್ವಹಿಸುತ್ತಿವೆ ಎಂದು ಬಸು ಹೇಳಿದರು.

"ಕೂಲಿಗೆ ಕಾಳು" ಯೋಜನೆಯ ಮೂಲಕ ಬೇಸಾಯ ಕೂಲಿಗಾರರಿಗೆ ಮತ್ತು ಬಡರೈತರಿಗೆ ವರ್ಷದಲ್ಲಿ 11 ತಿಂಗಳ ಉದ್ಯೋಗವನ್ನು ನೀಡುತ್ತಿರುವುದು ರಾಷ್ಟ್ರದಲ್ಲಿ ತಮ್ಮದೊಂದೇ ಸರ್ಕಾರವೆಂದು ಬಸು ಹೇಳಿದರು.

ಸರ್ಕಾರಿ ನೌಕರರು ಮತ್ತು ಪೋಲೀಸರಿಗೂ ಟ್ರೇಡ್‌ಯೂನಿಯನ್ ರಚಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಟ್ಟದ್ದೂ ತಮ್ಮ ಸರ್ಕಾರವೊಂದೇ ಎಂದು ಬಸು ಅಭಿಮಾನದಿಂದ ಹೇಳಿದರು.

ನಿಕಟ ಜನಸಂಪರ್ಕ ಹೊಂದಿರುವ ತಮ್ಮ ಸರ್ಕಾರದ ಸಾಧನೆಗಳನ್ನು ಸಹಿಸದ ಕಾಂಗ್ರೆಸ್(ಐ) ಪಕ್ಷವು (ಕೇಂದ್ರದ ಮಂತ್ರಿಗಳೂ ಸೇರಿದಂತೆ) ತಮ್ಮ ಸರ್ಕಾರವನ್ನು ಉರುಳಿಸಲು ನಿರಂತರ ಪ್ರಯತ್ನಿಸುತ್ತಿದ್ದಾರೆಂದು ಆಪಾದಿಸಿದ ಬಸು ಅವರು ಇದಕ್ಕೆ ಪ್ರಧಾನಿಯ ಸಮ್ಮತಿಯೂ ಇದೆ ಎಂದರು. ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಒಂದು ಪಕ್ಷದ ಅಧಿಕಾರವನ್ನು ತರುವುದೇ ಈ ಪ್ರಯತ್ನದ ಕಾರಣ ಎಂದು ಬಸು ಅವರು ಹೇಳಿ ಇದು ಸರ್ವಾಧಿಕಾರದತ್ತ ಸಾಗುತ್ತಿರುವ ಸೂಚನೆ ಎಂದರು. ಕಾಂಗ್ರೆಸ್(ಐ) ಪಕ್ಷದ ಸರ್ವಾಧಿಕಾರಿ ನೀತಿ, ಸಿರಿವಂತರ ಪರವಾದ ಆರ್ಥಿಕ ಧೋರಣೆಗಳ ವಿರುದ್ಧ ತಮ್ಮ ಪಕ್ಷವು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿಶಾಲ ರಂಗವೊಂದನ್ನು ಕಟ್ಟಲು ಪ್ರಯತ್ನಿಸುತ್ತಿದೆ. ಸಿ.ಪಿ.ಐ.(ಎಂ)ನ ಈ ಪ್ರಯತ್ನದಲ್ಲಿ ಕರ್ನಾಟದ ಜನತೆ ಸಹಕರಿಸಬೇಕು ಎಂದು ಜ್ಯೋತಿಬಸು ಅವರು ರಾಜ್ಯದ ಜನತೆಗೆ ಮನವಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾವ್ ವಹಿಸಿದ್ದರು. ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್ ವಂದಿಸಿದರು. ಸಿ. ಐ. ಟಿ.ಯು. ಉಪಾಧ್ಯಕ್ಷರುಗಳಲ್ಲಿ ಒಬ್ಬರಾದ ಕಾಂ. ಆರ್. ಜಿ. ಸ್ಥಳೇಕರ್ ಅವರು ಜ್ಯೋತಿಬಸು ಭಾಷಣವನ್ನು ಕನ್ನಡಕ್ಕೆ ಭಾಷಾಂತರಿಸಿದರು.

ಸಭೆಗೆ ಮುಂಚೆ ಮೂರು ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಕಾರ್ಮಿಕರು ಹರಿಹರದಲ್ಲಿ ಆಕರ್ಷಕ ಮೆರವಣಿಗೆ ನಡೆಸಿದರು.

ಸಮ್ಮೇಳನದಲ್ಲಿ ಪಾಲ್ಗೊಂಡ ಪ್ರತಿನಿಧಿಗಳ ಸಭೆಯಲ್ಲೂ ಭಾಷಣ ಮಾಡಿದ ಕಾಂ. ಜ್ಯೋತಿಬಸು ಅವರು ಸಿ.ಐ.ಟಿ.ಯು. ರಾಜ್ಯಸಮಿತಿಯು ಹೊರತಂದ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

(ಸಮ್ಮೇಳನವು 21 ನಿರ್ಣಯಗಳನ್ನು ಅಂಗೀಕರಿಸಿದ್ದು ಅವನ್ನು ಮುಂದಿನ ವಾರ ಕೊಡಲಾಗುವುದು) ●

ಸಂಪಾದಕೀಯ

ತೆಂದು ವರದಿಯಾಗಿದೆ. ಇದು ಯಾವ ಪ್ರಜಾಪ್ರಭುತ್ವ? ಇದನ್ನೆಲ್ಲಾ ಕೇಳುವವರು ಯಾರೂ ಇಲ್ಲವೇ? ರಾಜ್ಯದ ರಾಜಧಾನಿಯಲ್ಲೇ ಈ ತರದ ಗೂಂಡಾಗಿರಿ ನಡೆಯುತ್ತಿದ್ದರೆ ಇತರ ಕಡೆ ಪರಿಸ್ಥಿತಿ ಹೇಗಿರಬೇಕೆಂಬುದನ್ನು ಊಹಿಸಬಹುದು.

ಈಗಾಗಲೇ ಕಾಂಗ್ರೆಸ್‌ನ ಲೇಬರ್ ಸೆಲ್‌ನಲ್ಲಿ ಬದಲಾವಣೆ ತರಲಾಗಿದೆ. ಸಂಚಾಲಕ ಮರ್ಮಾರವರನ್ನು ತೆಗೆದು ಅವರ ಹುದ್ದೆಗೆ ಎಫ್. ಎಂ. ಖಾನ್‌ರವರನ್ನು ನೇಮಿಸಲಾಗಿದೆ. ಇದು ಬಹುಶಃ INTUC ಯ ಸೋಲಿನ ಪರಿಣಾಮದಿಂದಾಗಿರಬಹುದು. ಮತ್ತು ಬಹುಶಃ ಮುಂದೆ ಅದು ತೀವ್ರ ಅಪಾಯಕಾರಿ ಧೋರಣೆಯನ್ನನುಸರಿಸಬಹುದೆಂಬುದನ್ನು ತೋರಿಸುತ್ತದೆ. ಇದನ್ನು ಎಲ್ಲ ಕಾರ್ಮಿಕಸಂಘಟನೆಗಳೂ ಗಮನಿಸುವುದಗತ್ಯ.

ಈ ದಬ್ಬಾಳಿಕೆ ಕೂಡಲೇ ನಿಲ್ಲಬೇಕು.

ನಾಗರಿಕ ಹಕ್ಕುಗಳ ರಕ್ಷಣೆಗೆ ಎಲ್ಲರೂ ಒಂದಾಗಿ ಹೋರಾಡೋಣ.

●

ದೇಶದಾದ್ಯಂತ ಯಶಸ್ವೀ ಮುಷ್ಕರ

(1ನೇ ಪುಟದಿಂದ)

ಯಶವಂತಪುರ ಮತ್ತು ಬಿ. ಇ. ಎಲ್. ಅಂಚೆ ಕಚೇರಿಗಳೆದುರು ಬಿ.ಇ.ಎಲ್. ವರ್ಕರ್ಸ್ ಯೂನಿಯನ್ ಕಾರ್ಯಕರ್ತರು ಪಿಕೆಟಿಂಗ್ ನಡೆಸಿದರು. ಈ ಪಿಕೆಟಿಂಗ್‌ನ ನೇತೃತ್ವವನ್ನು ಕಾಂ. ಎಂ.ಎಸ್.ಸಿ. ರಾವ್ ಮತ್ತಿತರರು ವಹಿಸಿದ್ದರು.

ಬೆಂಗಳೂರಿನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸುಮಾರು 200 ಕಾರ್ಯಕರ್ತರು ಬಂಧಿತರಾದರು. ಜಾಮೀನಿನ ಮೇಲೆ ಬಿಡುಗಡೆಯಾಗಲು ನಿರಾಕರಿಸಿದರು. ಮರುದಿನ (12-3-81) ಬಿಡುಗಡೆ ಮಾಡಲ್ಪಟ್ಟರು.

ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ ದಿಇತ್ಯರ್ಥ, ಎಲ್.ಐ.ಸಿ. ಅಧ್ಯಾದೇಶ ವಾಪಸ್ಸು ತೆಗೆದುಕೊಳ್ಳುವುದು, ಜಿ.ಇ.ಸಿ ಯ ಗೆಜೆಟ್ ನೋಟಿಫಿಕೇಷನ್ ರದ್ದುಪಡಿಸುವುದು, ವಜಾ ಮಾಡಲ್ಪಟ್ಟ ಲೋಕೋ ರನ್ನಿಂಗ್ ಸ್ಟಾಫ್‌ನವರನ್ನು ವಾಪಸ್ಸು ತೆಗೆದುಕೊಳ್ಳುವುದು ಇವೇ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಈ ಪಿಕೆಟಿಂಗ್ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಇದೇ ರೀತಿ ರಾಜ್ಯದ ವಿವಿದೆಡೆಯಲ್ಲಿಯೂ ಈ ಪಿಕೆಟಿಂಗ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಂಗಳೂರಿನಲ್ಲಿ ಕಾಂ. ಪಿ. ರಾಮಚಂದ್ರ ರಾವ್, ಕೆ.ಜಿ.ಎಫ್.ನಲ್ಲಿ ಕಾಂ. ವಿ.ಜೆ.ಕೆ. ನಾಯರ್‌ಗ ನೇತೃತ್ವದಲ್ಲಿ ಪಿಕೆಟಿಂಗ್ ಕಾರ್ಯಕ್ರಮ ನಡೆದಿದೆ. (ವಿವರವಾದ ವರದಿ ಲಭ್ಯವಾಗಿಲ್ಲ).

ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ನಡೆದ ಕಾರ್ಯಕ್ರಮದ ಕರೆಗೆ ಓಗೊಟ್ಟಿದ್ದಕ್ಕಾಗಿ ಕಾರ್ಮಿಕರನ್ನು ಸಿ. ಐ. ಟಿ. ಯು. ರಾಜ್ಯಸಮಿತಿಯ ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣರಾಯರು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

○

ಆಲೀಗಡ ಮುಸ್ಲಿಂ ಯೂನಿವರ್ಸಿಟಿಯಲ್ಲಿ ನಡೆಯುತ್ತಿರುವ ಚಳುವಳಿಯ ಬಗ್ಗೆ ಪೂರ್ಣ ವಿವರಗಳನ್ನೊಳಗೊಂಡ "ಅಲೀಗಡ್ ಯೂನಿವರ್ಸಿಟಿಯನ್ನು ರಕ್ಷಿಸಿ" (SAVE THE AMU) ಎಂಬ ಕಿರುಹೊತ್ತಿಗೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರಕಟಿಸಿದೆ.

25 ಪೈಸೆ ಬೆಲೆಯುಳ್ಳ ಈ ಕಿರುಹೊತ್ತಿಗೆಯನ್ನು ಈ ಕೆಳಗಿನ ವಿಳಾಸದಿಂದ ಪಡೆಯಬಹುದು.

Central Committee Office
14, Ashoka Road
New Delhi-110001.

ಎಸ್.ಎಫ್.ಐ. ಸಂಘಟನಾ ಸಮಿತಿ ರಚನೆ

ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ದಿನಾಂಕ 7-3-81ರಂದು ಸಭೆ ಸೇರಿದ್ದ ವಿದ್ಯಾರ್ಥಿಗಳ ತಾಲ್ಲೂಕು ಮಟ್ಟದ ಎಸ್. ಎಫ್ ಐ. ಸಂಘಟನಾ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರನ್ನಾಗಿ ಸಿ. ಎಂ. ಗಪ್ಪು ಮತ್ತು ಕಾರ್ಯದರ್ಶಿಯಾಗಿ ಎಂ. ಪ್ರಾಣೇಶ್ ಇವರು ಆಯ್ಕೆಯಾಗಿದ್ದಾರೆ. ಸಮಿತಿಯಲ್ಲಿ ಇರುವ ಇತರರು ಎನ್. ಬಿ. ಭೀಮಯ್ಯ, ಎಚ್. ವೈ. ಅಣ್ಣಾಜಿ, ಕೆ. ಕೆ. ರವಿ ಮತ್ತು ಕುಮಾರಿ ಸಿ. ಎನ್. ರತ್ನ.

ಸಭೆಯಲ್ಲಿ ಹಾಜರಿದ್ದ ರಾಜ್ಯ ಎಸ್. ಎಫ್. ಐ. ಅಧ್ಯಕ್ಷ ಕಾಂ. ಆರ್. ಜಯಕುಮಾರ್ ವಿದ್ಯಾರ್ಥಿಗಳಿಗೆ ಎಸ್. ಎಫ್. ಐ. ನ ಕಾರ್ಯಕ್ರಮಗಳನ್ನು ವಿವರಿಸಿದರು. ಆರಂಭದಲ್ಲಿ ಎಸ್.ಎಫ್.ಐ.ನ ರಾಜ್ಯ ಸಮಿತಿಯ ಸದಸ್ಯ ಕಾಂ. ಎಚ್. ಕೆ. ಮಧು ಸ್ವಾಗತಿಸಿದರು.

ಮಾರ್ಚ್ 23ರ ಕಾರ್ಯಕ್ರಮ ಏಪ್ರಿಲ್ 20ಕ್ಕೆ ಮುಂದೂಡಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್ (ಯು), ಮತ್ತು ಲೋಕದಳಗಳು ಸೇರಿರುವ ಕರ್ನಾಟಕ ಪ್ರಗತಿಪರ ಜನತಂತ್ರ ರಂಗದ "ರೈತ-ಕಾರ್ಮಿಕ ಹೋರಾಟ ಸಮಿತಿ"ಯು ಇದೇ ಮಾರ್ಚ್ 23ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗಳೆದುರು ನಡೆಸಲು ಯೋಜಿಸಿರುವ ಸಾಮೂಹಿಕ ಧರಣಿ ಕಾರ್ಯಕ್ರಮವನ್ನು ಏಪ್ರಿಲ್ 20ಕ್ಕೆ ಮುಂದೂಡಲಾಗಿದೆ.

ರೈತಕಾರ್ಮಿಕ ಹೋರಾಟ ಸಮಿತಿಯ ಸಂಚಾಲಕರು ಮತ್ತು ಸೆಕ್ರೆಟಾರಿಯೆಟ್ ಸಭೆಯು ಮಾರ್ಚ್ 12ರಂದು ಸೇರಿ ಈ ನಿರ್ಣಯವನ್ನು ಕೈಗೊಂಡಿದೆ. ಮಾರ್ಚ್ ತಿಂಗಳ 26ರಂದು ದೆಹಲಿಯಲ್ಲಿ ಜರಗಲಿರುವ "ಚಲೋ ಪಾರ್ಲಿಮೆಂಟ್" ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದಲೂ, ಅನೇಕ ಮುಖಂಡರುಗಳು ಮಾರ್ಚ್ ಕೊನೆಯ ತನಕ ವಿಧಾನ ಸಭಾ ಅಧಿವೇಶನದಲ್ಲಿರಬೇಕಾಗಿರುವುದರಿಂದಲೂ ಮತ್ತು ಕೆಲವೆಡೆಗಳಿಂದ ಮುಂದೂಡಬೇಕೆಂಬ ಬೇಡಿಕೆ ಬಂದಿರುವುದರಿಂದಲೂ ಕಾರ್ಯಕ್ರಮವನ್ನು ಏಪ್ರಿಲ್ 20ಕ್ಕೆ ಮುಂದೂಡುವ ತೀರ್ಮಾನಮಾಡಲಾಗಿದೆ. ಈಗಾಗಲೇ ಬೀದರ, ಗುಲಬರ್ಗಾ, ಬೆಳಗಾವಿ, ಧಾರವಾಡ, ಕೋಲಾರ ಮತ್ತಿತರ ಹಲವು ಜಿಲ್ಲೆಗಳಲ್ಲಿ 23ರಂದು ಕಾರ್ಯಕ್ರಮ ನಡೆಸಲು ಸಿದ್ಧತೆಗಳು ನಡೆದ ವರದಿಯಾಗಿದೆ. ಕಾರಣಾಂತರಗಳಿಂದ ಕಾರ್ಯಕ್ರಮ ಮುಂದೂಡಬೇಕಾಗಿಬಂದದ್ದನ್ನು ಗಮನಿಸಿ, ಸಿಕ್ಕಿದ ಸಮಯಾವಕಾಶವನ್ನು ಇನ್ನೂ ಉಪಯೋಗಿಸಿಕೊಂಡು, ಏಪ್ರಿಲ್ 20ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಭಾರಿಪ್ರಮಾಣದಲ್ಲಿ ಧರಣಿ ಕಾರ್ಯಕ್ರಮ ನಡೆಸಲು ಸಂಚಾಲಕರುಗಳು ಮತ್ತು ಸೆಕ್ರೆಟಾರಿಯೆಟ್ ಸಭೆ ಕರೆ ಈಯುತ್ತಿದೆ.

○

ಸಾರ್ವಜನಿಕ ಉದ್ದಿಮೆ ಕಾರ್ಮಿಕರ ಮುಷ್ಕರ ವಾಪಸ್

ಸುಮಾರು ೭೭ ದಿನಗಳಿಂದ ನಡೆಯುತ್ತಿದ್ದ ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರವನ್ನು ವಾಪಸ್ ತೆಗೆದುಕೊಳ್ಳಲಾಗಿದೆ.

೧೨-೩-೮೧ರಂದು ಬೆಂಗಳೂರಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಜೆ.ಎ.ಎಫ್. ಈ ತೀರ್ಮಾನವನ್ನು ಪ್ರಕಟಿಸಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT